ಕರ್ನಾಟಕ ಉಚ್ಚ ನ್ಯಾಯಾಲಯ

ಶ್ರೀ ಸಾಯಿ ಕೇಶವ ಎಂಟರ್ಪ್ರೈಸಸ್ ಮತ್ತು ಇತರರು -ವಿರುದ್ಧ ಕರ್ನಾಟಕ ರಾಜ್ಯದ ಪ್ರತಿನಿಧಿಯಾಗಿ ಮುಖ್ಯ ಕಾರ್ಯದರ್ಶಿ ಮತ್ತು ಇತರರು

ಸನ್ಮಾನ್ಯ ಮುಖ್ಯ ನ್ಯಾಯಮೂರ್ತಿ ಶ್ರೀ ಅಭಯ್ ಎಸ್. ಓಕಾ ಮತ್ತು ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಸ್. ವಿಶ್ವಜಿತ್ ಶೆಟ್ಟಿ

ಶ್ರೀ ಸಾಯಿ ಕೇಶವ ಎಂಟರ್ಪ್ರೈಸಸ್ ಮತ್ತು ಇತರರು -ವಿರುದ್ಧ ಕರ್ನಾಟಕ ರಾಜ್ಯದ ಪ್ರತಿನಿಧಿಯಾಗಿ ಮುಖ್ಯ ಕಾರ್ಯದರ್ಶಿ ಮತ್ತು ಇತರರು

* ರಿಟ್ ಅಜಿ ಸ ೦ ಖ್ಯೆ:8851/2020 (ಜಿಎಂ-ಎಂಎಂ-ಎಸ್) ಇದರೊ ೦ ದಿಗೆ ರೆ,

ದಿನಾಂಕ 7 ನೇ ಜನವರಿ, 2021.

ತೀರ್ಪು

ಮುಖ್ಯ ನ್ಯಾಯಮೂರ್ತಿ ಶ್ರೀ ಅಭಯ್ ಎಸ್. ಓಕಾ

ಈ ರಿಟ್ ಅರ್ಜಿಗಳಲ್ಲಿರುವ ಮುಖ್ಯ ವಿವಾದವೆಂದರೆ:

" ರಾಜ್ಯ ವಿಧಾನಮಂಡಲವು, ಕರ್ನಾಟಕ ರಾಜ್ಯಕ್ಕೆ ಸಿಂಧುವಾದ ಸಾಗಣೆ ಪರವಾನಗಿಯೊಂದಿಗೆ ಇತರ ರಾಜ್ಯಗಳಿಂದ ಕೆಲವು ಪ್ರವರ್ಗದ ಉಪ ಖನಿಜಗಳ ಪದಾರ್ಥಗಳನ್ನು ಸಾಗಣೆ ಮಾಡುವ ವ್ಯಕ್ತಿಯಿಂದ ಪ್ರವೇಶ ಶುಲ್ಕ ಸಂಗ್ರಹಣೆಯನ್ನು ಅಧಿಕೃತಗೊಳಿಸಿ ಕರ್ನಾಟಕ ಉಪ ಖನಿಜಗಳ ರಿಯಾಯಿತಿ ನಿಯಮಗಳು, 1994 ರ 42 ನೇ ನಿಯಮದ ( 7) ನೇ ಉಪ-ನಿಯಮವನ್ನು ಅಧಿನಿಯಮಿತಗೊಳಿಸಲು ವಿಧಾಯೀ ಸಕ್ಷಮತೆಯನ್ನು ಹೊಂದಿದೆಯೇ? "

2. ಭಾರತ ಸಂವಿಧಾನದ 226 ನೇ ಅನುಚ್ಛೇದದ ಮೇರೆಗೆ ಈ ಅರ್ಜಿಗಳಲ್ಲಿನ ಪ್ರಶ್ನೆಯು, ಕರ್ನಾಟಕ ಉಪ ಖನಿಜಗಳ ರಿಯಾಯಿತಿ ನಿಯಮಗಳು, 1994 ರ (ಸಂಕ್ಷಿಪ್ತವಾಗಿ, 1994 ರ ಸದರಿ ನಿಯಮಗಳು) 42 ನೇ ನಿಯಮದ ( 1) ನೇ ಉಪ-ನಿಯಮದ ಸಾಂವಿಧಾನಿಕ ಸಿಂಧುತ್ವಕ್ಕೆ ಸಂಬಂಧಿಸಿದೆ.ಕರ್ನಾಟಕ ಉಪ ಖನಿಜಗಳ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2020 ರ (ಸಂಕ್ಷಿಪ್ತವಾಗಿ, " 2020 ರ ತಿದ್ದು ಪಡಿ ನಿಯಮಗಳು ") ಮೂಲಕ ಅಳವಡಿಸಲಾಗಿರುವ 42 ನೇ ನಿಯಮದ ( 1) ನೇ ಉಪ-ನಿಯಮವನ್ನು ಈ ಕೆಳಗಿನಂತೆ ಓದಲಾಗಿದೆ:

"42. (7) ಇತರ ರಾಜ್ಯಗಳಿಂದ ಸಂಸ್ಕರಿಸಿದ ಕಟ್ಟಡ ನಿರ್ಮಾಣ ಕಲ್ಲುಗಳ ಸಾಗಣೆ:ಸಿಂಧುವಾದ ಪರವಾನಗಿಯೊಂದಿಗೆ ಇತರ ರಾಜ್ಯಗಳಿಂದ ಜಲ್ಲಿ ಕಲ್ಲು ಅಥವಾ ಜಲ್ಲಿ, ಅಳತೆ (ಸೈಜ್) ಕಲ್ಲುಗಳು, ಬಂಡೆಗಲ್ಲುಗಳು, ಎಮ್-ಸ್ಯಾಂಡ್ ಮತ್ತು ಇತರ ವಿಧದ ಕಲ್ಲುಗಳಂಥ ಸಂಸ್ಕರಿತ ಕಟ್ಟಡ ನಿರ್ಮಾಣ ಸಂಬಂಧಿ ಕಲ್ಲು ಸಾಮಗ್ರಿಗಳನ್ನು ಸಾಗಣೆ ಮಾಡುವ ವ್ಯಕ್ತಿಯಿಂದ ಪ್ರತಿ ಮೆಟ್ರಿಕ್ ಟನ್ನೆ ಎಪ್ಪತ್ತು ರೂಪಾಯಿಗಳ ಮೊತ್ತವನ್ನು ಸಂಗ್ರಹಿಸತಕ್ಕದ್ದು. "

3. ಅರ್ಜಿದಾರರು ತಮಿಳುನಾಡು ರಾಜ್ಯದ ಕೃಷ್ಣಗಿರಿ ಜಿಲ್ಲೆಯಲ್ಲಿ ಕಲ್ಲು ಒಡೆಯುವ ಮತ್ತು ಎಂ-ಸ್ಯಾಂಡ್ ತಯಾರಿಸುವ ವ್ಯವಹಾರ ನಡೆಸುತ್ತಿದ್ದಾರೆ. ತಯಾರಿಕಾ ಸ್ಥಾವರಗಳನ್ನು ನಿರ್ವಹಿಸುವುದಕ್ಕಾಗಿ ತಮಿಳುನಾಡು ಸರ್ಕಾರದಿಂದ ಅಗತ್ಯ ಪರವಾನಗಿಗಳನ್ನು ಮತ್ತು ಅನುಮೋದನೆಗಳನ್ನು ತಾವು ಪಡೆದಿರುವುದಾಗಿ ಮತ್ತು ಕಳೆದ ಹತ್ತು ವರ್ಷಗಳಿಗಿಂತಲೂ ಹೆಚ್ಚಿನ ಕಾಲದಿಂದ ಅಂಥ ಕಾವ್ಯಗಳನ್ನು ನಡೆಸುತ್ತಿರುವುದಾಗಿ ಅರ್ಜಿದಾರರು ಕ್ಲೇಮು ಮಾಡಿದ್ದಾರೆ.ತಾವು

ಬಿಡ್ಡಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸಿ, ತಮಿಳುನಾಡು ಸರ್ಕಾರದಿಂದ ಗಣಿ ಗುತ್ತಿಗೆಯನ್ನು ಪಡೆದಿರುವುದಾಗಿ ಅವರು ವಾದಿಸಿದ್ದಾರೆ.ಸಾಗಣೆ ಪರವಾನಗಿಗಳನ್ನು ಪಡೆದ ನಂತರ, ಕರ್ನಾಟಕ ಸರ್ಕಾರ ಸೇರಿದಂತೆ ಇತರ ರಾಜ್ಯಗಳಿಗೆ ಅರ್ಜಿದಾರರು ಸಿದ್ಧ ವಸ್ತುಗಳನ್ನು ಸಾಗಣೆ ಮಾಡುತ್ತಿದ್ದಾರೆ.

4. 42 ನೇ ನಿಯಮದ ( 1) ನೇ ಉಪ-ನಿಯಮಕ್ಕೆ ಸಂಬಂಧಿಸಿದ ಪ್ರಶ್ನೆಯು ಮೊದಲನೆಯದಾಗಿ, ಕರ್ನಾಟಕ ಗಣಿಗಳ ಮತ್ತು ಖನಿಜಗಳ (ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ, 1957 ರ (ಸಂಕ್ಷಿಪ್ತವಾಗಿ, " 1957 ರ ಸದರಿ ಅಧಿನಿಯಮ ") 15 ನೇ ಪ್ರಕರಣದ ಉಪಬಂಧಗಳು, ಇತರ ರಾಜ್ಯಗಳಿಂದ ಲೈಸೆನ್ಸ್ಯುಕ್ತ ಸರಕುಗಳ ಸಾಗಣೆಗಾಗಿ ಶುಲ್ಕಗಳನ್ನು ವಿಧಿಸುವ ಸಂಬಂಧದಲ್ಲಿ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುವುದಿಲ್ಲವೆಂಬ ಕಾರಣವನ್ನಾಧರಿಸಿದೆ.ಎರಡನೆಯದಾಗಿ, 42 ನೇ ನಿಯಮದ ( 1) ನೇ ಉಪ-ನಿಯಮವು (ಸಂಕ್ಷಿಪ್ತವಾಗಿ " ಪ್ರಶ್ನಿತ ನಿಯಮ ") ಭಾರತ ಸಂವಿಧಾನದ 301 ನೇ ಅನುಚ್ಛೇದದ ಉಲ್ಲಂಘನೆಯಾಗಿದೆ ಎಂಬುದಾಗಿದೆ.ಇದು ಅಂತರ್-ರಾಜ್ಯ ವ್ಯಾಪಾರದ ಮೇಲೆ ಕಾನೂನುಬಾಹಿರ ನಿರ್ಬಂಧಗಳನ್ನು ವಿಧಿಸುತ್ತದೆ ಎಂಬುದಾಗಿ ವಾದಿಸಲಾಗಿದೆ.ಅಂಥ ನಿಯಮವನ್ನು ರಚಿಸುವುದಕ್ಕೆ ರಾಜ್ಯ ಸರ್ಕಾರವು ಅಧಿಕಾರ ಚಲಾಯಿಸಿರುವುದು ಭಾರತ ಸಂವಿಧಾನದ 265 ನೇ ಅನುಚ್ಛೇದಕ್ಕನುಗುಣವಾಗಿರುವುದಿಲ್ಲ ಎಂದೂ ಸಹ ವಾದಿಸಲಾಗಿದೆ.

ಅರ್ಜಿದಾರರ ನಿವೇದನೆಗಳು:

5. ಅರ್ಜಿದಾರರ ಪರ ಹಾಜರಾದ ಮಾನ್ಯ ಹಿರಿಯ ನ್ಯಾಯವಾದಿ ಶ್ರೀ ಅರವಿಂದ್ ಕುಳೂರ್ ಕಾಮತ್ ಅವರು, ಖನಿಜಗಳ ಸಾಗಣೆಯ ಕ್ಷೇತ್ರವನ್ನು ಮತ್ತು ಗಣಿಗಾರಿಕೆಯ ನಿಯಂತ್ರಣವನ್ನು 1957 ರ ಸದರಿ ಅಧಿನಿಯಮವು ಈಗಾಗಲೇ ವ್ಯಾಪಿಸಿದ್ದು, ಅದು ಸಂಸತ್ತು ರಚಿಸಿದ ಕಾನೂನಾಗಿದೆ ಎಂದು ನಿವೇದಿಸಿಕೊಂಡಿದ್ದಾರೆ.1957 ರ ಸದರಿ ಅಧಿನಿಯಮದ ಅಡಿಯಲ್ಲಿ, ಅದರ 15 ನೇ ಮತ್ತು 23-ಸಿ ಪ್ರಕರಣಗಳಿಗನುಗುಣವಾಗಿ ಮಾತ್ರವೇ ನಿಯಮಗಳನ್ನು ರಚಿಸಲು ರಾಜ್ಯಗಳಿಗೆ ಅಧಿಕಾರ ಪ್ರದಾನ ಮಾಡಲಾಗಿದೆ ಎಂಬುದರ ಕಡೆ ಅವರು ಗಮನ ಸೆಳೆದಿದ್ದಾರೆ.ಅನಧಿಕೃತ ಸಾಗಣೆ ಮತ್ತು ಅನಧಿಕೃತ ಕಲ್ಲು ಗಣಿಗಾರಿಕೆಯನ್ನು ನಿಯಂತ್ರಿಸುವುದಕ್ಕಾಗಿ 1994 ನೇ ಸಾಲಿನಿಂದಲೇ ರಾಜ್ಯದಲ್ಲಿ ಹಲವಾರು ತಪಾಸಣಾ ಕೇಂದ್ರಗಳನ್ನು (ಚೆಕ್-ಪೋಸ್ಟ್) ರಾಜ್ಯ ಸರ್ಕಾರವು ಈಗಾಗಲೇ ಸ್ಥಾಪಿಸಿದೆ ಎಂಬುದರ ಕಡೆ ಗಮನ ಸೆಳೆಯಲಾಗಿದೆ.ಅಂಥ ತಪಾಸಣಾ ಕೇಂದ್ರಗಳನ್ನು (ಚೆಕ್-ಪೋಸ್ಟ್) ಸ್ಥಾಪಿಸಲು ಹೊರಡಿಸಿದ್ದ ಅಧಿಸೂಚನೆಗಳ ಪ್ರತಿಗಳನ್ನು ದಾಖಲೆಯಲ್ಲಿ ಸೇರಿಸಲಾಗಿದೆ.ಪ್ರಶ್ನಿತ 42 ನೇ ನಿಯಮದ ( 7) ನೇ ಉಪ-ನಿಯಮವು, ಶುಲ್ಕ ವಿಧಿಸುವ ಉದ್ದೇಶ ಮತ್ತು ಸ್ವರೂಪವನ್ನು ನಿಯಮಿಸುವುದಿಲ್ಲ ಹಾಗೂ ಸರಳವಾಗಿ ರಾಜ್ಯದವರಲ್ಲದ ಸಾಗಣೆದಾರರು ಒಂದು ಮೆಟ್ರಿಕ್ ಟನ್ನ್ಗೆ ಎಪ್ಪತ್ತು ರೂಪಾಯಿಗಳ ಮೊತ್ತವನ್ನು ಸಂದಾಯ ಮಾಡಬೇಕೆಂದು ಹೇಳುತ್ತದೆಂದು ಮತ್ತು ಅದನ್ನು ಶುಲ್ಕವೆಂದು ವಿವರಿಸಿರುವುದಿಲ್ಲವೆಂದು ನಿವೇದಿಸಿಕೊಳ್ಳಲಾಗಿದೆ.ರಾಜ್ಯ ಸರ್ಕಾರವು ತನ್ನ ಆಕ್ಷೇಪಣೆಗಳ ಹೇಳಿಕೆಯಲ್ಲಿ ತೆಗೆದುಕೊಂಡ ನಿಲುವಿನ ಕಡೆಗೆ ಸಹ ಮಾನ್ಯ ನ್ಯಾಯವಾದಿಗಳು ನಮ್ಮ ಗಮನವನ್ನು ಸೆಳೆದಿದ್ದಾರೆ.1957 ರ ಸದರಿ ಅಧಿನಿಯಮದ 15 ನೇ ಪ್ರಕರಣದ ಅಡಿಯಲ್ಲಾಗಲಿ ಅಥವಾ 23-ಸಿ ಪ್ರಕರಣದ ಅಡಿಯಲ್ಲಾಗಲಿ ರಾಜ್ಯದ ವಿಧಾಯೀ ಅಧಿಕಾರವು ಬರುವುದಿಲ್ಲ ಎಂದು ಅವರು ನಿವೇದಿಸಿಕೊಂಡಿದ್ದಾರೆ.

6. ಅರ್ಜಿದಾರರ ಪರ ಮಾನ್ಯ ಹಿರಿಯ ನ್ಯಾಯವಾದಿಗಳು, ಭಾರತ ಸಂವಿಧಾನದ ಏಳನೇ ಪರಿಶಿಷ್ಟದಲ್ಲಿನ II ನೇ ಪಟ್ಟಿಯ 66 ನೇ ನಮೂದಿಗನುಸಾರವಾಗಿ, ಶುಲ್ಕಗಳನ್ನು ವಿಧಿಸುವುದಕ್ಕಾಗಿ ಕಾನೂನು ರಚಿಸುವ ರಾಜ್ಯ ಸರ್ಕಾರದ ಅಧಿಕಾರವನ್ನು, ಸಂಪೂರ್ಣ ಕಾನೂನು ರಚಿಸುವುದಕ್ಕೆ ಮಾತ್ರವೇ ಚಲಾಯಿಸಬಹುದಾಗಿದೆಯೇ ಹೊರತು, ಪ್ರತ್ಯಾಯೋಜಿತ ಶಾಸನದ ಅಧಿಕಾರ ಚಲಾವಣೆಗೆ ಅಲ್ಲವೆಂದು ನಿವೇದಿಸಿಕೊಂಡಿದ್ದಾರೆ.1957 ರ ಸದರಿ ಅಧಿನಿಯಮದ 15 ನೇ ಪ್ರಕರಣವಾಗಲಿ ಅಥವಾ 23-ಸಿ ಪ್ರಕರಣವಾಗಲಿ, ಕಾನೂನುಬಾಹಿರ ಸಾಗಣೆಯ ತಪಾಸಣೆ ಮಾಡುವುದಕ್ಕಾಗಿ

ಮೂಲಸೌಕರ್ಯ್ಯಗಳನ್ನು ಸ್ಥಾಪಿಸುವ ಸಂಬಂಧದಲ್ಲಿನ ವೆಚ್ಚಗಳನ್ನು ವಸೂಲು ಮಾಡಿಕೊಳ್ಳುವುದಕ್ಕೆ ಶುಲ್ಕಗಳನ್ನು ವಿಧಿಸಲು ರಾಜ್ಯ ಸರ್ಕಾರಕ್ಕೆ ಅನುಮತಿಸುವುದಿಲ್ಲ.

7. ರಾಜ್ಯ ಸರ್ಕಾರವು ಸಲ್ಲಿಸಿದ ಆಕ್ಷೇಪಣೆಗಳ ಹೇಳಿಕೆಯಲ್ಲಿ ಮಾಡಿದ ವಾದಗಳನ್ನು ಅವಲೋಕಿಸಲಾಗಿ, ತಪಾಸಣಾ ಕೇಂದ್ರ (ಚೆಕ್-ಪೋಸ್ಟ್) ಗಳ ಮೂಲಸೌಕರ್ಯ ಸ್ಥಾಪನೆಗಾಗಿ ಭರಿಸಿದ ವೆಚ್ಚಗಳನ್ನು ವಸೂಲು ಮಾಡಿಕೊಳ್ಳಲು ಪ್ರಶ್ನಿತ ಶುಲ್ಕಗಳನ್ನು ಸಂಗ್ರಹಿಸಲಾಗಿದೆ ಎಂಬುದು ಗೊತ್ತಾಗುತ್ತದೆ; ಆದುದರಿಂದ, ಇದು ಪರಿಹಾರಾತ್ಮಕ ಶುಲ್ಕ ಮಾತ್ರವಾಗಿದ್ದು, ನಿಯಂತ್ರಣಾತ್ಮಕ ಶುಲ್ಕ ಅಲ್ಲವಾದ್ದರಿಂದ, ಅಂಥ ಶುಲ್ಕವನ್ನು ವಿಧಿಸುವುದು ನಿಯಂತ್ರಣಾತ್ಮಕವೆಂಬ ರಾಜ್ಯ ಸರ್ಕಾರದ ವಾದವನ್ನು ಒಪ್ಪಲಾಗುವುದಿಲ್ಲ ಮತ್ತು ಪ್ರತಿಫಲ ಸಿದ್ಧಾಂತ ಪರೀಕ್ಷೆಯನ್ನು ಅನ್ವಯಿಸಬಹುದಾಗಿದ್ದು, ಅರ್ಜಿದಾರರಿಗೆ ಸೇವೆಯನ್ನು ಒದಗಿಸಲಾಗಿದೆ ಎಂ ಎಂಬುದನ್ನು ಸಾಬೀತುಪಡಿಸುವ ಹೊಣೆಯು ರಾಜ್ಯ ಸರ್ಕಾರದ್ದಾಗಿದೆ ಎಂದು ಅವರು ನಿವೇದಿಸಿಕೊಂಡಿದ್ದಾರೆ.

8. ಇದಲ್ಲದೆ ಅವರು, ಸದರಿ ನಿಯಮದ ಉದ್ದೇಶವು ಅನ್ವಯವಾಗುವ ವ್ಯಕ್ತಿಗಳ ವರ್ಗ ಮತ್ತು ಶುಲ್ಕ ಸಂದಾಯ ಮಾಡುವ ವ್ಯಕ್ತಿಗಳ ವರ್ಗದ ನಡುವೆ ಪರಸ್ಪರ ಸಂಬಂಧವೇ ಇಲ್ಲವೆಂದು ನಿವೇದಿಸಿಕೊಂಡಿದ್ದಾರೆ.ಮುಂದುವರಿದು ಅವರು ನಿವೇದಿಸಿಕೊಂಡಿರುವುದೇನೆಂದರೆ, ಶುಲ್ಕ ವಸೂಲಿಯ ಆರೋಪಿತ ಉದ್ದೇಶವು ರಾಜ್ಯದ ಒಳಗಿನಿಂದ ಮತ್ತು ಹೊರಗಿನಿಂದ ಎರಡೂ ಕಡೆಯಿಂದ ಖನಿಜಗಳ ಅಕ್ರಮ ಸಾಗಣಿಕೆಯನ್ನು ತಪಾಸಣೆ ಮಾಡುವುದಕ್ಕಾಗಿರುತ್ತದೆಯಾದ್ದರಿಂದ, ರಾಜ್ಯದ ಹೊರಗಿನಿಂದ ಖನಿಜಗಳನ್ನು ಸಾಗಣೆ ಮಾಡುವಂಥವರಿಗೆ ಮಾತ್ರವೇ ಶುಲ್ಕಗಳನ್ನು ವಿಧಿಸಲಾಗುವುದಿಲ್ಲ.ಆದುದರಿಂದ, ಇದು ಸಂವಿಧಾನದ 14 ನೇ ಅನುಚ್ಛೇದದ ಉಲ್ಲಂಘನೆಯಾಗುತ್ತದೆ ಎಂದು ಅವರು ನಿವೇದಿಸಿಕೊಂಡಿದ್ದಾರೆ.ಅಲ್ಲದೆ ಅವರು, ಪ್ರಶ್ನಿತ ಶುಲ್ಕ ವಿಧಿಸುವಿಕೆಯು ಭಾರತ ಸಂವಿಧಾನದ 301 ನೇ ಅನುಚ್ಛೇದ ಉಲ್ಲಂಘನೆ ಸಹ ಆಗಿದೆ ಎಂದು ನಿವೇದಿಸಿಕೊಂಡಿದ್ದಾರೆ.ತಮ್ಮ ನಿವೇದನೆಗಳಿಗೆ ಸಮರ್ಥನೆಯಾಗಿ ಮಾನ್ಯ ನ್ಯಾಯವಾದಿಗಳು ಈ ಮುಂದಿನ ನಿರ್ಣಯಗಳನ್ನು ಅವಲಂಬಿಸಿದ್ದಾರೆ:

i) ಗುಜರಾತ್ ರಾಜ್ಯ ಮತ್ತು ಇತರರು -ವಿರುದ್ಧ-ಜಯೇಶ್ಬಾಯಿ ಕಾಂಜಿಭಾಯಿ ಕಲಾತಿಯಾ ಮತ್ತು ಇತರರು-(2019) 16 ಎಸ್ಸಿ 513

ii) ವ್ಯಾಮ್ ಆರ್ಗ್ಯಾನಿಕ್ ಕೆಮಿಕಲ್ಸ್ ಅಮಿಟೆಡ್ ಮತ್ತು ಇನ್ನೊಬ್ಬರು ವಿರುದ್ಧ ಉತ್ತರ ಪ್ರದೇಶ ರಾಜ್ಯ ಮತ್ತು ಇತರರು-(1997) 2 ಎಸ್ಸಿಸಿ 715

iii) ಶ್ರೀ ಶ್ರೀ ಶ್ರೀ ಕೆ.ಸಿ. ಗಣಪತಿ ನಾರಾಯಣ ದೇವ್ ಮತ್ತು ಇತರರು ವಿರುದ್ಧ ಒರಿಸ್ಸಾ ರಾಜ್ಯ - ಎಐಆರ್ 1953 ಎಸ್ಸಿ 375

iv) ಅಶೋಕ್ ಕುಮಾರ್ ಅಲಿಯಾಸ್ ಗೋಲು ವಿರುದ್ಧ ಭಾರತ ಒಕ್ಕೂಟ ಮತ್ತು ಇತರರು- (1991) 3 ಎಸ್ಸಿಸಿ 498

v) ವೆಲ್ಫೇರ್ ಅಸೋಸಿಯೇಷನ್, ಎ.ಆರ್.ಪಿ., ಮಹಾರಾಷ್ಟ್ರ ಮತ್ತು ಇನ್ನೊಬ್ಬರು -ವಿರುದ್ಧ-ರಂಜಿತ್ ಪಿ. ಗೋಯೆಲ್ ಮತ್ತು ಇತರರು. - (2003) 9 ಎಸ್ಸಿಸಿ 358

ಅಡ್ವಕೇಟ್ ಜನರಲ್ರುವರ ನಿವೇದನೆಗಳು:

9. ಮಾನ್ಯ ಅಡ್ವಕೇಟ್ ಜನರಲ್ ಶ್ರೀ ಪ್ರಭುಲಿಂಗ ನಾವದಗಿಯವರು ಸವಿವರವಾದ ನಿವೇದನೆಗಳನ್ನು ಮಾಡಿಕೊಳ್ಳುವ ಮೂಲಕ ಅರ್ಜಿಗಳನ್ನು ವಿರೋಧಿಸಿದ್ದಾರೆ.ಅವರು ಆಕ್ಷೇಪಣೆಗಳ ಹೇಳಿಕೆಯಲ್ಲಿ ತೆಗೆದುಕೊಂಡ ನಿಲುವಿನೆಡೆಗೆ ನ್ಯಾಯಾಲಯದ ಗಮನ ಸೆಳೆದಿದ್ದಾರೆ.1957 ರ ಸದರಿ ಅಧಿನಿಯಮವನ್ನು ಏಳನೇ ಪರಿಶಿಷ್ಟದ 1 ನೇ ಪಟ್ಟಿಯ 54 ನೇ ನಮೂದಿನ ಮೇರೆಗೆ ಅಧಿನಿಯಮಿತ

ಗೊಳಿಸಲಾಗಿದ್ದು, ಉಪ ಖನಿಜಗಳ ವಿಷಯವನ್ನು ರಾಜ್ಯ ಸರ್ಕಾರಗಳಿಗೆ ಕಾಯ್ದಿರಿಸಲಾಗಿದೆ ಎಂದು ಮಾನ್ಯ ಅಡ್ವಕೇಟ್ ಜನರಲ್ರವರು ನಿವೇದಿಸಿಕೊಂಡಿದ್ದಾರೆ.18 ನೇ ಡಿಸೆಂಬರ್, 1999 ರಿಂದ ಜಾರಿಯಾದ 1999 ರ ಅಧಿನಿಯಮ ಸಂಖ್ಯೆ 38 ರ ಮೂಲಕ 1957 ರ ಸದರಿ ಅಧಿನಿಯಮದಲ್ಲಿ ಅಳವಡಿಸಿದ 4 ( 1 ಎ) ಪ್ರಕರಣದ ಕಡೆಗೆ ನಮ್ಮ ಗಮನವನ್ನು ಸೆಳೆದು, 1957 ರ ಸದರಿ ಅಧಿನಿಯಮದ ಮತ್ತು ಅದರಡಿ ರಚಿಸಿದ ನಿಯಮಗಳ ಉಪಬಂಧಗಳಿಗನುಸಾರವಾಗಿ D ಹೊರತು, ಯಾರೇ ವ್ಯಕ್ತಿಯು ಯಾವುದೇ ಖನಿಜಗಳನ್ನು ಸಾಗಣೆ ಮಾಡಲು, ಸಂಗ್ರಹಿಸಲು ಅಥವಾ ಸಾಗಣೆ ಮಾಡುವಂತೆ ಅಥವಾ ಸಂಗ್ರಹಿಸುವಂತೆ ಮಾಡಲು ಹಕ್ಕುಳ್ಳವರಾಗುವುದಿಲ್ಲವೆಂದು ಅವರು ವಾದಿಸಿದ್ದಾರೆ.15 ನೇ ಪ್ರಕರಣದ ( 1 ಎ) ಉಪ-ಪ್ರಕರಣದ (ಜಿ) ಖಂಡದ ಮೇರೆಗೆ ರಾಜ್ಯ ಸರ್ಕಾರವು ಬಾಡಿಗೆ, ರಾಯಧನ, ಶುಲ್ಕ, ಖಾಲಿ ಬಾಡಿಗೆ, ಜುಲ್ಮಾನೆಗಳು ಅಥವಾ ಇತರ ಚಾರ್ಜುಗಳನ್ನು ನಿಗದಿಪಡಿಸಲು ಮತ್ತು ಸಂಗ್ರಹಿಸುವ ಸಂಬಂಧದಲ್ಲಿ ನಿಯಮಗಳನ್ನು ರಚಿಸಲು ಅಧಿಕಾರ ಹೊಂದಿದೆ ಎಂಬ ವಿಷಯದ ಕಡೆಗೆ ಅವರು ಗಮನ ಸೆಳೆದಿದ್ದಾರೆ.15 ನೇ ಪ್ರಕರಣದ ( 1 ಎ) ಉಪ-ಪ್ರಕರಣದ ಹಾಗೂ 15 ನೇ ಪ್ರಕರಣದ ( 1 ಎ) ಉಪ-ಪ್ರಕರಣದ ( ಒ) ಖಂಡವು ಪದ್ಯಾಲೋಚಿಸಿದಂತೆ, ರಾಜ್ಯ ಸರ್ಕಾರದಲ್ಲಿ ಅಧಿಕಾರವನ್ನು ನಿಹಿತಗೊಳಿಸುವ ಸಾಮಾನ್ಯ ನಿಯಮವಿದೆ ಎಂಬುದರ ಕಡೆ ಅವರು ಗಮನ ಸೆಳೆದಿದ್ದಾರೆ.1957 ರ ಸದರಿ ಅಧಿನಿಯಮದ 23-ಸಿ ಖಂಡವು, ಖನಿಜಗಳ ಅಕ್ರಮ ಗಣಿಗಾರಿಕೆ, ಸಾಗಣೆ ಮತ್ತು ಸಂಗ್ರಹವನ್ನು ತಡೆಯುವುದಕ್ಕಾಗಿ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರಗಳನ್ನು ಪ್ರದಾನ ಮಾಡಿದೆ ಎಂದು ಅವರು ವಾದಿಸಿದ್ದಾರೆ.ಗಣಿಗಳು ಮತ್ತು ಖನಿಜಗಳ ನಿಯಂತ್ರಣವು ರಾಜ್ಯ ಸರ್ಕಾರಕ್ಕೆ ಲಭ್ಯವಾಗಬಹುದಾದ ಕಾನೂನು ಕ್ಷೇತ್ರವಾಗಿದೆ ಎಂದು ಅವರು ನಿವೇದಿಸಿಕೊಂಡಿದ್ದಾರೆ.15 ನೇ ಪ್ರಕರಣದ ಅಧಿನಿಯಮಿತಿಯ ಹಿನ್ನೆಲೆಯಲ್ಲಿ, ಉಪ ಖನಿಜಗಳಿಗೆ ಸಂಬಂಧಿಸಿದ ಸಂಪೂರ್ಣ ಕ್ಷೇತ್ರವು ಕೇಂದ್ರ ಶಾಸಕಾಂಗದ ವ್ಯಾಪ್ತಿಯೊಳಗೆ ಬರುತ್ತದೆ ಮತ್ತು ಸಮಗ್ರ ಶಾಸನವನ್ನು ರಚಿಸಲು ರಾಜ್ಯ ಸರ್ಕಾರಗಳಿಗೆ ಯಾವ ಅವಕಾಶವು ಉಳಿದಿಲ್ಲವೆಂದು ಅವರು ನಿವೇದಿಸಿಕೊಂಡಿದ್ದಾರೆ.ಉಪ ಖನಿಜಗಳಿಗೆ ಸಂಬಂಧಿಸಿದ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಪ್ರದತ್ತವಾದ 15 ನೇ ಪ್ರಕರಣದ ಅಡಿಯಲ್ಲಿನ ಅಧಿಕಾರಗಳು ಅತ್ಯಂತ ವ್ಯಾಪಕವಾಗಿವೆ ಎಂದು ಅವರು ನಿವೇದಿಸಿಕೊಂಡಿದ್ದಾರೆ.

10. ಮಾನ್ಯ ಅಡ್ವಕೇಟ್ ಜನರಲ್ರವರು, ವ್ಯಾಮ್ ಆರ್ಗ್ಯಾನಿಕ್ ಕೆಮಿಕಲ್ಸ್ ನ (ಮೇಲೆ ಹೇಳಿದ) ಮೊಕದ್ದಮೆಯಲ್ಲಿನ ನಿರ್ಣಯವನ್ನು ಸಹ ಅವಲಂಬಿಸಿದ್ದಾರೆ.ಅವರು, ಸಂಡೂರು ಮ್ಯಾಂಗನೀಸ್ ಅಂಡ್ ಐರನ್ ಓರ್ಸ್ ಅಮಿಟೆಡ್ -ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು. (2010) 13 ಎಸ್ಸಿಸಿ ಮೊಕದ್ದಮೆಯಲ್ಲಿನ ಸರ್ವೋಚ್ಚ ನ್ಯಾಯಾಲಯದ ಚ ನಿರ್ಣಯವನ್ನು ಸಹ ಅವಲಂಬಿಸಿದ್ದಾರೆ.

11. ಅವರು, 1957 ರ ಸದರಿ ಅಧಿನಿಯಮದ 23-ಸಿ ಪ್ರಕರಣದ ಕಡೆಗೆ ಗಮನ ಸೆಳೆದು, 23-ಸಿ ಪ್ರಕರಣದ ವ್ಯಾಪ್ತಿಯು, ಅಕ್ರಮ ಗಣಿಗಾರಿಕೆಯನ್ನು ತಡೆಯುವುದು ಮಾತ್ರವಲ್ಲದೆ, ಖನಿಜಗಳ ಅಕ್ರಮ ಸಾಗಣೆ ಹಾಗೂ ಅಕ್ರಮ ಸಂಗ್ರಹವನ್ನು ತಡೆಯುವುದನ್ನು ಸಹ ಒಳಗೊಳ್ಳುತ್ತದೆ ಎಂದು ನಿವೇದಿಸಿಕೊಂಡಿದ್ದಾರೆ.ಸಾಗಣೆಯಲ್ಲಿರುವ ಖನಿಜಗಳ ತಪಾಸಣೆಗಾಗಿ ತಪಾಸಣಾ ಕೇಂದ್ರಗಳನ್ನು (ಚೆಕ್-ಪೋಸ್ಟ್) ಸ್ಥಾಪಿಸುವ ಸಂಬಂಧದಲ್ಲಿ ನಿಯಮಗಳನ್ನು ರಚಿಸಲು 23-ಸಿ ಪ್ರಕರಣವು ರಾಜ್ಯ ಸರ್ಕಾರಗಳಿಗೆ ಅಧಿಕಾರ ನೀಡುತ್ತದೆ ಎಂದು ಅವರು ನಿವೇದಿಸಿಕೊಂಡಿದ್ದಾರೆ.ಸಾಗಣೆ ಅವಧಿಯಲ್ಲಿ ಖನಿಜಗಳ ತಪಾಸಣೆ ಮತ್ತು ಶೋಧನೆ ಮಾಡುವುದಕ್ಕಾಗಿ ನಿಯಮಗಳನ್ನು ರಚಿಸಲು ಮತ್ತು ಖನಿಜಗಳ ಅಕ್ರಮ ಗಣಿಗಾರಿಕೆ ಹಾಗೂ ಸಾಗಣೆ ಮತ್ತು ಸಂಗ್ರಹವನ್ನು ತಡೆಯುವ ಉದ್ದೇಶ ಕುರಿತು ವ್ಯವಹರಿಸಬೇಕಾದ ಅಗತ್ಯವಿರುವ ವಿಷಯಗಳನ್ನು ಕುರಿತು ವ್ಯವಹರಿಸಲು ಸಹ 23-ಸಿ ಪ್ರಕರಣವು ರಾಜ್ಯ ಸರ್ಕಾರವನ್ನು ಸಮರ್ಥಗೊಳಿಸುತ್ತದೆ ಎಂದು ಅವರು ನಿವೇದಿಸಿಕೊಂಡಿದ್ದಾರೆ.23-ಸಿ ಪ್ರಕರಣದ ದೃಷ್ಟಿಯಲ್ಲಿ, ಅಕ್ರಮ ಗಣಿಗಾರಿಕೆ ತಡೆಯುವ ವಿಷಯ ಕುರಿತು ವ್ಯವಹರಿಸಲು ರಾಜ್ಯ ಸರ್ಕಾರಕ್ಕೆ ಮಾತ್ರವೇ ಅಧಿಕಾರವ್ಯಾಪ್ತಿ ಇದ್ದು, ಅಕ್ರಮ ಗಣಿಗಾರಿಕೆಯು, ಕರ್ನಾಟಕ ರಾಜ್ಯಕ್ಕೆ ಮಾತ್ರವೇ ಸೀಮಿತವಾಗಿರದಿರುವುದರಿಂದ, ಅಕ್ರಮವಾಗಿ ಹೊರತೆಗೆದ ಖನಿಜಗಳನ್ನು ಕರ್ನಾಟಕ

ರಾಜ್ಯದೊಳಗೆ ತರುವುದನ್ನು ತಡೆಯುವುದು ಅವಶ್ಯಕವಾಗಿದೆ ಹಾಗೂ ಅಕ್ರಮವಾಗಿ ಹೊರತೆಗೆದ ಖನಿಜಗಳು ಕರ್ನಾಟಕ ರಾಜ್ಯದ ಅಧಿಕಾರ ಕ್ಷೇತ್ರದೊಳಗೆ ಪ್ರವೇಶಿಸುವುದನ್ನು ತಡೆಯುವುದು ಕರ್ನಾಟಕ ರಾಜ್ಯದ ಕಾಳಜಿಯಾಗಿದೆ ಎಂದು ಅವರು ವಾದಿಸಿದ್ದಾರೆ.ದಾಖಲೆಯಲ್ಲಿ ಹಾಜರುಪಡಿಸಿದ ಹೆಚ್ಚುವರಿ ದಸ್ತಾವೇಜುಗಳು, ಇತರ ರಾಜ್ಯ ಸರ್ಕಾರಗಳು ನೀಡಿದ ಸಾಗಣೆ ರಹದಾರಿ ಚೀಟಿಗಳನ್ನು (ಪಾಸ್) ಅಕ್ರಮವಾಗಿ ತಿದ್ದಿದ ಹಲವಾರು ಉದಾಹರಣೆಗಳಿವೆ ಮತ್ತು ಇತರ ರಾಜ್ಯಗಳಿಂದ ಸಿಂಧುವಾದ ಪರವಾನಗಿಗಳನ್ನು ಪಡೆಯದೆ ಇತರ ರಾಜ್ಯಗಳಿಂದ ಖನಿಜಗಳನ್ನು ಸಾಗಣೆ ಮಾಡುತ್ತಿರುವ ಉದಾಹರಣೆಗಳು ಸಹ ಇವೆ ಎಂಬುದರ ಕಡೆ ಅವರು ಗಮನ ಸೆಳೆದಿದ್ದಾರೆ.ಪ್ರಶ್ನಿತ 42 ನೇ ನಿಯಮದ ( 7) ನೇ ಉಪ-ನಿಯಮದ ಅಡಿಯಲ್ಲಿ ನೀಡಲಾದ ಸೇವೆಗೆ ಶುಲ್ಕ ನಿಗದಿಪಡಿಸಲಾಗಿದೆ ಮತ್ತು ಪ್ರಶ್ನಿತ 42 ನೇ ನಿಯಮದ ( 1) ನೇ ಉಪ-ನಿಯಮದ ಪ್ರಕಾರ ಹೇಗೆ ಪ್ರತಿ ಮೆಟ್ರಿಕ್ ಟನ್ನ್ಗೆ 70/- ರೂ.ಗಳ ಮೊತ್ತವನ್ನು ವಿಧಿಸಲಾಗುತ್ತಿದೆ ಎಂಬ ಆಕ್ಷೇಪಣೆಗಳ ಹೇಳಿಕೆಯಲ್ಲಿ ಇದನ್ನು ತೋರಿಸಲಾಗಿದೆ ಎಂಬುದರ ಕಡೆ ಅವರು ಗಮನ ಸೆಳೆದಿದ್ದಾರೆ.ಆಕ್ಷೇಪಣೆಗಳ ಹೇಳಿಕೆ ಅನುಬಂಧ-ಆರ್ -1 ಇದು, ಸಂಗ್ರಹಿಸಿದ ಶುಲ್ಕ ಮತ್ತು ನೀಡಿದ ಸೇವೆಗಳ ನಡುವಿನ ಪರಸ್ಪರ ಸಂಬಂಧವನ್ನು ತೋರಿಸುತ್ತದೆ ಎಂದು ಅವರು ನಿವೇದಿಸಿಕೊಂಡಿದ್ದಾರೆ.ಕರ್ನಾಟಕ ರಾಜ್ಯದ ಅಧಿಕಾರ ಕ್ಷೇತ್ರದೊಳಗೆ ಅಕ್ರಮವಾಗಿ ಗಣಿಗಾರಿಕೆ ಮಾಡಿದ ಖನಿಜಗಳ ಪ್ರವೇಶವನ್ನು ತಡೆಯುವುದಕ್ಕಾಗಿ ತಪಾಸಣಾ ಕೇಂದ್ರಗಳನ್ನು (ಚೆಕ್-ಪೋಸ್ಟ್) ಸ್ಥಾಪಿಸಲು ಎಲ್ಲ ಅಧಿಕಾರವಿರುವುದರಿಂದ, ಶುಲ್ಕ ವಿಧಿಸುವುದು ನ್ಯಾಯಯುತವಾಗಿದೆ ಎಂದು ಅವರು ನಿವೇದಿಸಿಕೊಂಡಿದ್ದಾರೆ.

12. ಹಿಮಾಚಲ ಪ್ರದೇಶ ರಾಜ್ಯ ಮತ್ತು ಇತರರು -ವಿರುದ್ಧ ಶಿವಾಲಿಕ್ ಆಗ್ರೋ ಪಾಲಿ ಪ್ರೊಡಕ್ಟ್ಸ್ ಮತ್ತು ಇತರರು -(2004) 8 ಎಸ್ಸಿಸಿ 556 ಮೊಕದ್ದಮೆಯಲ್ಲಿನ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಣಯವನ್ನವಲಂಬಿಸಿ, ತೆರಿಗೆ ಮತ್ತು ಶುಲ್ಕಗಳ ಸ್ವರೂಪ ಮತ್ತು ಅವುಗಳ ನಡುವಿನ ವ್ಯತ್ಯಾಸವು ಕಾಣದಾಗುವ ಸ್ಥಿತಿ ತಲುಪಿದೆ ಎಂದು ಅವರು ನಿವೇದಿಸಿಕೊಂಡಿದ್ದಾರೆ.ಆದುದರಿಂದ, ಅಕ್ರಮ ಗಣಿಗಾರಿಕೆಯನ್ನು ತಡೆಯುವ ಪ್ರಮುಖ ಉದ್ದೇಶದ ಗುರಿ ಸಾಧನೆಗಾಗಿ ಸಂಗ್ರಹಿಸಿದ ಶುಲ್ಕ ಮತ್ತು ನೀಡಿದ ಸೇವೆ ನಡುವೆ ಸ್ಥಾಪಿತವಾದ ಸ್ಥೂಲ ಪರಸ್ಪರ ಸಂಬಂಧವಿದ್ದು, ನಿಷ್ಕೃಷ್ಟವಾದ ಅರ್ಥದಲ್ಲಿ ಪ್ರತಿಫಲ ಸಿದ್ಧಾಂತದ ಮೂಲಾಂಶವು ಶುಲ್ಕ ವಿಧಿಸುವುದಕ್ಕೆ ಅತ್ಯಾವಶ್ಯಕವಾಗಿರುವುದಿಲ್ಲವೆಂದು ಅವರು ನಿವೇದಿಸಿಕೊಂಡಿದ್ದಾರೆ.1957 ರ ಸದರಿ ಅಧಿನಿಯಮದ 15 ನೇ ಪ್ರಕರಣದ ( 1) ನೇ ಉಪ-ಪ್ರಕರಣದ (ಜಿ) ಖಂಡದ ಮೇರೆಗೆ, ಶುಲ್ಕ ನಿಗದಿ ಮತ್ತು ಶುಲ್ಕ ಸಂಗ್ರಹಣೆಯು 1957 ರ ಸದರಿ ಅಧಿನಿಯಮದ 23-ಸಿ ಪ್ರಕರಣದ ( 1) ನೇ ಉಪ-ಪ್ರಕರಣದ (ಜಿ) ಖಂಡದ ಮುಂದುವರಿಕೆಯಾಗುವುದು.

13. ಸಂವಿಧಾನದ 301 ನೇ ಮತ್ತು 304 ನೇ ಅನುಚ್ಛೇದಗಳ ಉಲ್ಲಂಘನೆ ಕುರಿತ ಅರ್ಜಿದಾರರ ವಾದಗಳನ್ನು ಉಲ್ಲೇಖಿಸಿ, ಗುಜರಾತ್ ರಾಜ್ಯ (ಮೇಲೆ ಹೇಳಿದ) ಮೊಕದ್ದಮೆಯು ರಾಜ್ಯದೊಳಗೆ ಸರಕುಗಳ ಪ್ರವೇಶದ ಮೇಲೆ ಸಂಪೂರ್ಣ ನಿಷೇಧ ವಿಧಿಸುವ ಮೊಕದ್ದಮೆಯಾಗಿತ್ತಾದ್ದರಿಂದ, ಸದರಿ ಮೊಕದ್ದಮೆಯಲ್ಲಿನ ಸರ್ವೋಚ್ಚ ನ್ಯಾಯಾಲಯದ ನಿರ್ಣಯವು ಇಲ್ಲಿ ಚ ಅನ್ವಯವಾಗುವುದಿಲ್ಲವೆಂದು ಅವರು ವಾದಿಸಿದ್ದಾರೆ.ಪ್ರತಿ ಮೆಟ್ರಿಕ್ ಟನ್ನ್ಗೆ 70/ ರೂ.ಗಳ ಶುಲ್ಕ ವಿಧಿಸುವಿಕೆಯು ರಾಜ್ಯದಲ್ಲಿ ವ್ಯಾಪಾರ ನಿರ್ಬಂಧವನ್ನು ಸೃಜಿಸುವುದಿಲ್ಲವೆಂದು ಅವರು ನಿವೇದಿಸಿಕೊಂಡಿದ್ದಾರೆ.

14. ಕರ್ನಾಟಕ ರಾಜ್ಯದ ಹೊರಗೆ ಉಪ ಖನಿಜಗಳ ಕಲ್ಲುಗಣಿಗಾರಿಕೆ ನಡೆಸುತ್ತಿರುವವರು, ಕರ್ನಾಟಕ ರಾಜ್ಯದ ಪ್ರದೇಶವನ್ನು ಪ್ರವೇಶಿಸುವ ಸಮಯದಲ್ಲಿ ಪ್ರವೇಶ ಶುಲ್ಕ ಸಂದಾಯ ಮಾಡುವ ಅಗತ್ಯವಿದೆ ಎಂದು ಅವರು ನಿವೇದಿಸಿಕೊಂಡಿದ್ದಾರೆ.ಅದೇ ರೀತಿಯಾಗಿ, ಕರ್ನಾಟಕ ರಾಜ್ಯದಲ್ಲಿ ಕಲ್ಲು ಗಣಿಗಾರಿಕೆ ನಡೆಸುತ್ತಿರುವವರು ರಾಜ್ಯಕ್ಕೆ ರಾಯಧನ ಮತ್ತು ಖಾಲಿ ಬಾಡಿಗೆ ಸಂದಾಯ ಮಾಡುವ ಅಗತ್ಯವಿದೆ.

15. ವಿ.ಎಸ್. ಲಾಡ್ ಅಂಡ್ ಸನ್ಸ್ ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು- ಐಎಲ್ಆರ್ 11 ಕೆಎಆರ್ 1333 (ಡಬ್ಲ್ಯುಪಿ,ಸಂಖ್ಯೆ: 24103/2010, 19.11.2010 ರಂದು ನಿರ್ಣಯಿಸಲಾಗಿದೆ. ಮೊಕದ್ದಮೆಯಲ್ಲಿ ಈ ನ್ಯಾಯಾಲಯವು ನೀಡಿದ ನಿರ್ಣಯವನ್ನವಲಂಬಿಸಿ, ಸದರಿ ನಿರ್ಣಯದಲ್ಲಿ 23-ಸಿ ಪ್ರಕರಣದ ವ್ಯಾಪ್ತಿಯನ್ನು ವಿಧಿಸಲಾಗಿದೆ ಎಂದು ಅವರು ನಿವೇದಿಸಿಕೊಂಡಿದ್ದಾರೆ.ಆದುದರಿಂದ, 42 ನೇ ನಿಯಮದ ( 7) ನೇ ಉಪ ನಿಯಮದ ಉಪಬಂಧವು ಸಾಂವಿಧಾನಿಕವಾಗಿ ಸಿಂಧುವಾದುದಾಗಿದ್ದು, ಹಸ್ತಕ್ಷೇಪ ಮಾಡುವ ಅಗತ್ಯವಿಲ್ಲವೆಂದು ಅವರು ನಿವೇದಿಸಿಕೊಂಡಿರುವರು.

ರಾಜ್ಯ ಸರ್ಕಾರದ ನಿವೇದನೆಗಳಿಗೆ ಅರ್ಜಿದಾರರ ಉತ್ತರ

16. ಮಾನ್ಯ ಅಡ್ವಕೇಟ್ ಜನರಲ್ರವರ ನಿವೇದನೆಗಳಿಗೆ ಮಾನ್ಯ ಹಿರಿಯ ನ್ಯಾಯವಾದಿಗಳು ಸಂಕ್ಷಿಪ್ತವಾಗಿ ಉತ್ತರ ನೀಡಿದ್ದಾರೆ.1957 ರ ಸದರಿ ಅಧಿನಿಯಮದ 15 ನೇ ಪ್ರಕರಣದ ಅಡಿಯಲ್ಲಿ ನಿಯಮ ರಚಿಸುವ ಅಧಿಕಾರವನ್ನು, ಇತರ ರಾಜ್ಯಗಳಲ್ಲಿ ಅಕ್ರಮವಾಗಿ ಹೊರತೆಗೆದ ಖನಿಜಗಳ ಸಾಗಣೆಯನ್ನು ನಿಯಂತ್ರಿಸಲು ವಿಸ್ತರಿಸಲಾಗುವುದಿಲ್ಲ ಎಂಬ ಮಾತನ್ನು ಅವರು ಪುನರುಚ್ಚರಿಸಿದ್ದಾರೆ.ಗುಜರಾತ್ ರಾಜ್ಯ ಮತ್ತು ಇತರರು -ವಿರುದ್ಧ ಜಯೇಶ್ಬಾಯಿ ಕಾಂಜಿಭಾಯಿ ಕಲಾತಿಯ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ಚ ನಿರ್ಣಯವನ್ನವಲಂಬಿಸಿ, ರಾಜ್ಯ ಸರ್ಕಾರವು ಅಕ್ರಮವಾಗಿ ಹೊರತೆಗೆದ ಖನಿಜಗಳನ್ನು ನಿಯಂತ್ರಿಸಲು ಕಾನೂನು ರಚಿಸುವ ಅಧಿಕಾರವನ್ನು ಹೊಂದಿಲ್ಲವೆಂದು ಅವರು ನಿವೇದಿಸಿಕೊಂಡಿದ್ದಾರೆ.ಯಾವುದೇ ಹಣಕಾಸು ಹೊಣೆಗಾರಿಕೆಯನ್ನು ವಿಧಿಸುವ ಅಧಿಕಾರವು ವ್ಯಕ್ತವಾಗಿರಬೇಕು ಮತ್ತು ಹಸ್ತಕ್ಷೇಪ ಮಾಡುವುದನ್ನು ಸೂಚಿಸುವಂತಿರಬಾರದು ಎಂದು ಅವರು ನಿವೇದಿಸಿಕೊಂಡಿದ್ದಾರೆ.ಪ್ರಶ್ನಿತ ಶುಲ್ಕ ವಿಧಿಸುವಿಕೆಯು ಹಣಕಾಸು ಹೊಣೆಗಾರಿಕೆಯಾಗಿದ್ದು, ಅದು ಸಂವಿಧಾನದ 301 ನೇ ಅನುಚ್ಛೇದದ ಉಲ್ಲಂಘನೆಯಾಗಿ ಪರಿಣಮಿಸಿ, ಅಂತರ-ರಾಜ್ಯ ವ್ಯಾಪಾರಕ್ಕೆ ಅಡಚಣೆಯಾಗಿ ಕಾರನಿರ್ವಹಿಸುತ್ತದೆ ಎಂದು ಅವರು ನಿವೇದಿಸಿಕೊಂಡಿದ್ದಾರೆ.

ನಿವೇದನೆಗಳ ಪರಿಗಣನೆ:1957 ರ ಸದರಿ ಅಧಿನಿಯಮದ 23-ಸಿ ಪ್ರಕರಣದ ಅಡಿಯಲ್ಲಿ ನಿಯಮ ರಚನಾಧಿಕಾರ:

17. ನ್ಯಾಯಾಲಯದ ಮುಂದೆ ಮಂಡಿಸಿದ ನಿವೇದನೆಗಳನ್ನು ನಾವು ಜಾಗರೂಕತೆಯಿಂದ ಪರಿಗಣಿಸಿದ್ದೇವೆ.ಮೇಲಿನ 2 ನೇ ಕಂಡಿಕೆಯಲ್ಲಿ ಪ್ರಶ್ನಿತ ಉಪ-ನಿಯಮವನ್ನು ನಾವು ಈಗಾಗಲೇ ಉಲ್ಲೇಖಿಸಿದ್ದೇವೆ.1994 ರ ಸದರಿ ನಿಯಮಗಳ ಪ್ರಸ್ತಾವನೆ ಪ್ರಕಾರ, 1957 ರ ಸದರಿ ಅಧಿನಿಯಮದ 15 ನೇ ಪ್ರಕರಣದ ಅಡಿಯಲ್ಲಿ ರಾಜ್ಯಕ್ಕೆ ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸಿ ಅದನ್ನು ರಚಿಸಲಾಗಿದೆ ಎಂಬುದನ್ನು ಇಲ್ಲಿ ನಾವು ಗಮನಿಸಬಹುದಾಗಿದೆ.1957 ರ ಸದರಿ ಅಧಿನಿಯಮವು ಖನಿಜ ತೈಲಗಳನ್ನು ಹೊರತುಪಡಿಸಿ ಎಲ್ಲಾ ಖನಿಜಗಳಿಗೆ ಅನ್ವಯವಾಗುತ್ತದೆ.ಉಪ ಖನಿಜಗಳನ್ನು 1957 ರ 3 ನೇ ಪ್ರಕರಣದ ( ಇ) ಖಂಡದಲ್ಲಿ ಪರಿಭಾಷಿಸಲಾಗಿದೆ.1957 ರ ಸದರಿ ಅಧಿನಿಯಮದ 5 ರಿಂದ 13 ನೇ ಪ್ರಕರಣಗಳು (ಎರಡನ್ನು ಒಳಗೊಂಡು) ಉಪ ಖನಿಜಗಳಿಗೆ ಅನ್ವಯವಾಗುವುದಿಲ್ಲ.1957 ರ ಸದರಿ ಅಧಿನಿಯಮದ 4 ನೇ ಪ್ರಕರಣದ ( 1) ನೇ ಉಪ-ಪ್ರಕರಣವು, 1957 ರ ಸದರಿ ಅಧಿನಿಯಮದ ಉಪಬಂಧಗಳ ಮತ್ತು ಅದರಡಿ ರಚಿಸಿದ ನಿಯಮಗಳ ಅಡಿಯಲ್ಲಿ ಮಂಜೂರು ಮಾಡಿದ ಸ್ಥಳಾನ್ವೇಷಣೆ ಪರವಾನಗಿ ಅಥವಾ ಶೋಧನಾ ಲೈಸೆನ್ಸ್ ಅಥವಾ ಸಂದರ್ಭಾನುಸಾರ, ಮಂಜೂರು ಮಾಡಿದ ಗಣಿ ಗುತ್ತಿಗೆಯ ನಿಬಂಧನೆಗಳು ಮತ್ತು ಷರತ್ತುಗಳಿಗನುಸಾರವಾಗಿ ಹೊರತು, ಯಾವುದೇ ಪ್ರದೇಶದಲ್ಲಿ ಯಾವುದೇ ಸ್ಥಳಾನ್ವೇಷಣೆ, ಶೋಧನೆ ಅಥವಾ ಗಣಿಗಾರಿಕೆ ಕಾರಾಚರಣೆಗಳನ್ನು ಯಾರೇ ವ್ಯಕ್ತಿಯು ಕೈಗೊಳ್ಳತಕ್ಕದ್ದಲ್ಲವೆಂದು ವಿಧಿಸುತ್ತದೆ. 4 ನೇ ಪ್ರಕರಣದ 1 ಎ ಉಪ-ಪ್ರಕರಣದ ಮೇರೆಗೆ, 1957 ರ ಸದರಿ ಅಧಿನಿಯಮದ ಉಪಬಂಧಗಳ ಮತ್ತು ಅದರಡಿ ರಚಿಸಿದ ನಿಯಮಗಳಿಗನುಸಾರ ಹೊರತು ಬೇರೆ ರೀತಿಯಲ್ಲಿ ಯಾರೇ ವ್ಯಕ್ತಿಯು ಯಾವುದೇ

ಖನಿಜವನ್ನು ಸಂಗ್ರಹಿಸತಕ್ಕದ್ದಲ್ಲ ಅಥವಾ ಸಾಗಣೆ ಮಾಡುವಂತೆ ಅಥವಾ ಸಂಗ್ರಹಿಸುವಂತೆ ಮಾಡತಕ್ಕದ್ದಲ್ಲವೆಂದು ಉಪಬಂಧಿಸಲಾಗಿದೆ.4 ಎ ಪ್ರಕರಣದ ( 1) ನೇ ಉಪ-ಪ್ರಕರಣದ ಅಡಿಯಲ್ಲಿ, ಕೇಂದ್ರ ಸರ್ಕಾರವು, ಅಂಥ ಶೋಧನಾ ಲೈಸೆನ್ಸ್ ಅಥವಾ ಗಣಿಗಾರಿಕೆ ಗುತ್ತಿಗೆಯನ್ನು ಅವಧಿಗೂ ಮುನ್ನ ಕೊನೆಗೊಳಿಸುವ ಅಧಿಕಾರ ಹೊಂದಿದೆ.4 ಎ ಪ್ರಕರಣದ ( 2) ನೇ ಉಪ-ಪ್ರಕರಣವು, ಉಪ ಖನಿಜಗಳ ಸಂಬಂಧದಲ್ಲಿ ಶೋಧನಾ ಲೈಸೆನ್ಸನ್ನು ಅಥವಾ ಗಣಿಗಾರಿಕೆ ಗುತ್ತಿಗೆಯನ್ನು ಅವಧಿಗೆ ಮುನ್ನ ಕೊನೆಗೊಳಿಸುವ ಅಧಿಕಾರವನ್ನು ರಾಜ್ಯ ಸರ್ಕಾರಕ್ಕೆ ಪ್ರಧಾನ ಮಾಡಿದೆ.

18. ಉಪ ಖನಿಜಗಳ ಸಂಬಂಧದಲ್ಲಿ ರಾಜ್ಯ ಸರ್ಕಾರಕ್ಕೆ ನಿಯಮ ರಚಿಸುವ ಅಧಿಕಾರವನ್ನು ಪ್ರದಾನ ಮಾಡುವ 1957 ರ ಸದರಿ ಅಧಿನಿಯಮದ 15 ನೇ ಪ್ರಕರಣವನ್ನು ಈ ಕೆಳಗಿನಂತೆ ಓದಲಾಗಿದೆ:

"15. ಉಪ ಖನಿಜಗಳ ಸಂಬಂಧದಲ್ಲಿ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಗಳಿಗಿರುವ ಅಧಿಕಾರ.- ( 1) ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯ ಪತ್ರದಲ್ಲಿ ಅಧಿಸೂಚನೆ ಹೊರಡಿಸುವ ಮೂಲಕ, ಖನಿಜಗಳ ಸಂಬಂಧದಲ್ಲಿ ಕಲ್ಲು ಗಣಿಗಾರಿಕೆ ಗುತ್ತಿಗೆಗಳು, ಗಣಿಗಾರಿಕೆ ಗುತ್ತಿಗೆಗಳು ಅಥವಾ ಇತರ ಉಪ ಖನಿಜ ರಿಯಾಯಿತಿಗಳ ಮಂಜೂರಾತಿಯನ್ನು ನಿಯಂತ್ರಿಸಲು ಮತ್ತು ಅದಕ್ಕೆ ಸಂಬಂಧಿಸಿದ ಉದ್ದೇಶಗಳಿಗಾಗಿ ನಿಯಮಗಳನ್ನು ರಚಿಸಬಹುದು.

( 1-ಎ) ವಿಶೇಷವಾಗಿ ಮತ್ತು ಹಿಂದಿನ ಅಧಿಕಾರದ ಸಾಮಾನ್ಯತೆಗೆ ಬಾಧಕವಾಗದಂತೆ, ಈ ಮುಂದಿನ ಎಲ್ಲಾ ಅಥವಾ ಯಾವುದೇ ವಿಷಯಗಳಿಗೆ ಅಂಥ ನಿಯಮಗಳನ್ನು ರಚಿಸಬಹುದು, ಎಂದರೆ:

( ಎ) ಕಲ್ಲು ಗಣಿಗಾರಿಕೆ ಗುತ್ತಿಗೆಗಳು, ಗಣಿಗಾರಿಕೆ ಗುತ್ತಿಗೆಗಳು ಅಥವಾ ಇತರ ಖನಿಜ ರಿಯಾಯಿತಿಗಳಿಗಾಗಿ ಯಾವ ವ್ಯಕ್ತಿ ಮತ್ತು ಯಾವ ರೀತಿಯಲ್ಲಿ ಅರ್ಜಿಗಳನ್ನು ಸಲ್ಲಿಸಬಹುದು ಮತ್ತು ಅದಕ್ಕಾಗಿ ಸಂದಾಯ ಮಾಡಬೇಕಾದ ಶುಲ್ಕಗಳು;

(ಬಿ) ಅಂಥ ಯಾವುದೇ ಅರ್ಜಿಗಳನ್ನು ಸ್ವೀಕರಿಸಿದ ಬಗ್ಗೆ ಸ್ವೀಕೃತಿಯನ್ನು ಯಾವ ಸಮಯದೊಳಗಾಗಿ ಮತ್ತು ಯಾವ ನಮೂನೆಯಲ್ಲಿ ಕಳುಹಿಸಬಹುದು;

(ಸಿ) ಅರ್ಜಿಗಳನ್ನು ಒಂದೇ ಜಮೀನಿನ ಸಂಬಂಧದಲ್ಲಿ ಒಂದೇ ದಿನದೊಳಗಾಗಿ ಸ್ವೀಕರಿಸಲಾಗಿದ್ದಲ್ಲಿ ಯಾವ ವಿಷಯಗಳನ್ನು ಪರಿಗಣಿಸಬಹುದು;

(ಡಿ) ಕಲ್ಲು ಗಣಿಗಾರಿಕೆ ಗುತ್ತಿಗೆಗಳು, ಗಣಿಗಾರಿಕೆ ಗುತ್ತಿಗೆಗಳು ಅಥವಾ ಇತರ ಖನಿಜ ರಿಯಾಯಿತಿಗಳನ್ನು ಯಾವ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಮತ್ತು ಯಾವ ಪ್ರಾಧಿಕಾರವು ಮಂಜೂರು ಮಾಡಬಹುದು ಅಥವಾ ನವೀಕರಿಸಬಹುದು;

(ಇ) ಕಲ್ಲು ಗಣಿಗಾರಿಕೆ ಗುತ್ತಿಗೆಗಳು, ಗಣಿಗಾರಿಕೆ ಗುತ್ತಿಗೆಗಳು ಅಥವಾ ಇತರ ಖನಿಜ ರಿಯಾಯಿತಿಗಳನ್ನು ಪಡೆಯುವುದಕ್ಕಾಗಿ ಅನುಸರಿಸಬೇಕಾದ ಪ್ರಕ್ರಿಯೆ;

(ಎಫ್) ಗಣಿಗಾರಿಕೆ ಕಾರಾಚರಣೆಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಸಂಶೋಧನೆ ಕೈಗೊಳ್ಳುವ ಮತ್ತು ತರಬೇತಿ ನೀಡುವ ಉದ್ದೇಶಕ್ಕಾಗಿ ಸರ್ಕಾರವು ನಿಯೋಜಿಸಿದ ವ್ಯಕ್ತಿಗಳಿಗೆ ಕಲ್ಲು ಗಣಿಗಾರಿಕೆ ಗುತ್ತಿಗೆಗಳು, ಗಣಿಗಾರಿಕೆ ಗುತ್ತಿಗೆಗಳು ಅಥವಾ ಇತರ ಖನಿಜ ರಿಯಾಯಿತಿಗಳ ಧಾರಕರು ಒದಗಿಸಬೇಕಾದ ಸೌಲಭ್ಯಗಳು;

(ಜಿ) ಬಾಡಿಗೆ, ರಾಯಧನ, ಶುಲ್ಕ, ಖಾಲಿ ಬಾಡಿಗೆ, ಜುಲ್ಮಾನೆಗಳು ಅಥವಾ ಇತರ ಚಾರ್ಜುಗಳನ್ನು ನಿಗದಿಪಡಿಸುವ ಮತ್ತು ಸಂಗ್ರಹಿಸುವ ಮತ್ತು ಇವುಗಳನ್ನು ಸಂದಾಯ ಮಾಡತಕ್ಕ ರೀತಿ:

(ಹೆಚ್) ಯಾವುದೇ ಅನ್ವೇಷಣೆಯ ಅಥವಾ ಗಣಿಗಾರಿಕೆ ಕಾರಾಚರಣೆಗಳ ಕಾರಣದಿಂದ ಯಾರೇ ಮೂರನೇ ಪಕ್ಷಕಾರರು ಪ್ರತಿಕೂಲ ಪರಿಣಾಮದಿಂದ ಬಾಧಿತನಾದ ಸಂದರ್ಭಗಳಲ್ಲಿ, ಅಂಥ

ಪಕ್ಷಕಾರರ ಹಕ್ಕುಗಳನ್ನು (ಪರಿಹಾರ ಸಂದಾಯದ ಮೂಲಕವಾಗಲಿ ಅಥವಾ ಬೇರೆ ರೀತಿಯಲ್ಲಾಗಲಿ) ಸಂರಕ್ಷಿಸಬಹುದಾಗಿರುವ ರೀತಿ;

( ಐ) ಯಾವುದೇ ಕಲ್ಲು ಗಣಿಗಾರಿಕೆ ಅಥವಾ ಗಣಿಗಾರಿಕೆ ಕಾವ್ಯಾಚರಣೆಗಳ ಕಾರಣದಿಂದ ನಾಶವಾದ ಮರಗಳು, ಕುರುಚಲು ಗಿಡಗಳು ಮತ್ತು ಅಂಥ ಇತರ ಸಸ್ಯ ಸಂಕುಲ ಮತ್ತು ಇತರ ಸಸ್ಯ ವರ್ಗಗಳ ಪುನಃಸ್ಥಾಪನೆಯನ್ನು, ಅದೇ ಪ್ರದೇಶದಲ್ಲಿ ಅಥವಾ ರಾಜ್ಯ ಸರ್ಕಾರವು ಆಯ್ಕೆ ಮಾಡುವ ಯಾವುದೇ ಇತರ ಪ್ರದೇಶದಲ್ಲಿ, ಕಲ್ಲು ಗಣಿಗಾರಿಕೆ ಅಥವಾ ಗಣಿಗಾರಿಕೆ ಗುತ್ತಿಗೆಯನ್ನು ಧಾರಣ ಮಾಡಿರುವ ವ್ಯಕ್ತಿಯು ಮಾಡತಕ್ಕ ರೀತಿ;

(ಜೆ) ಕಲ್ಲು ಗಣಿಗಾರಿಕೆ ಗುತ್ತಿಗೆ, ಗಣಿಗಾರಿಕೆ ಗುತ್ತಿಗೆ ಅಥವಾ ಇತರ ಖನಿಜ ರಿಯಾಯಿತಿಯನ್ನು ಯಾವ ರೀತಿಯಲ್ಲಿ ಮತ್ತು ಯಾವ ಷರತ್ತುಗಳಿಗೆ ಒಳಪಟ್ಟು ವರ್ಗಾವಣೆ ಮಾಡಬಹುದು

(ಕೆ) ಕಲ್ಲು ಗಣಿಗಾರಿಕೆ ಗುತ್ತಿಗೆ, ಗಣಿಗಾರಿಕೆ ಗುತ್ತಿಗೆ ಅಥವಾ ಇತರ ಖನಿಜ ರಿಯಾಯಿತಿಯನ್ನು ಒಳಗೊಂಡಿರುವ ಯಾವುದೇ ಜಮೀನಿನನಲ್ಲಿ ಗಣಿಗಾರಿಕೆ ಉದ್ದೇಶಗಳಿಗಾಗಿ ರಸ್ತೆಗಳ, ವಿದ್ಯುಚ್ಛಕ್ತಿ ಪ್ರಸರಣ ಮಾರ್ಗಗಳ, ಟ್ರಾಮ್-ವೇಗಳ, ರೈಲ್ವೆಗಳ, ಏರಿಯಲ್ ರೋಪ್-ವೇಗಳ, ಕೊಳವೆ ಮಾರ್ಗಗಳ ನಿರ್ಮಾಣ, ನಿರ್ವಹಣೆ ಮತ್ತು ಬಳಕೆ ಹಾಗೂ ಜಲ ಮಾರ್ಗಗಳ ನಿರ್ಮಾಣ;

(ಎಲ್) ಈ ಅಧಿನಿಯಮದ ಅಡಿಯಲ್ಲಿ ನಿರ್ವಹಿಸಬೇಕಾದ ರಿಜಿಸ್ಟರ್ ನಮೂನೆಗಳು;

(ಎಂ) ಕಲ್ಲು ಗಣಿಗಾರಿಕೆ ಗುತ್ತಿಗೆ, ಗಣಿಗಾರಿಕೆ ಗುತ್ತಿಗೆ ಅಥವಾ ಇತರ ಖನಿಜ ರಿಯಾಯಿತಿಗಳ ಧಾರಕರು ಸಲ್ಲಿಸಬೇಕಾದ ವರದಿಗಳು ಮತ್ತು ವಿವರಪಟ್ಟಿಗಳು ಹಾಗೂ ಅಂಥ ವರದಿಗಳು ಮತ್ತು ವಿವರಪಟ್ಟಿಗಳನ್ನು ಯಾವ ಪ್ರಾಧಿಕಾರಕ್ಕೆ ಸಲ್ಲಿಸಬೇಕು;

(ಎನ್) ಈ ನಿಯಮಗಳ ಅಡಿಯಲ್ಲಿ ಯಾವುದೇ ಪ್ರಾಧಿಕಾರವು ಹೊರಡಿಸಿದ ಯಾವುದೇ ಆದೇಶದ ಪರಿಷ್ಕರಣೆಗಾಗಿ ಅರ್ಜಿಗಳನ್ನು ಯಾವ ಅವಧಿಯೊಳಗೆ ಮತ್ತು ಯಾವ ರೀತಿಯಲ್ಲಿ ಹಾಗೂ ಯಾವ ಪ್ರಾಧಿಕಾರಕ್ಕೆ ಸಲ್ಲಿಸಬಹುದು ಮತ್ತು ಅದಕ್ಕಾಗಿ ಸಂದಾಯ ಮಾಡಬೇಕಾದ ಶುಲ್ಕ ಹಾಗೂ ಪರಿಷ್ಕರಣಾ ಪ್ರಾಧಿಕಾರವು ಹೊಂದಿರಬೇಕಾದ ಅಧಿಕಾರಗಳು:

( ಒ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

( 2) ( 1) ನೇ ಉಪ-ಪ್ರಕರಣದ ಅಡಿಯಲ್ಲಿ ನಿಯಮಗಳನ್ನು ರಚಿಸುವವರೆಗೆ, ಈ ಅಧಿನಿಯಮದ ಜಾರಿಗೆ ಮೊದಲು ತತ್ಕಾಲದಲ್ಲಿ ಜಾರಿಯಲ್ಲಿರುವ ಉಪ ಖನಿಜಗಳ ಸಂಬಂಧದಲ್ಲಿನ ಕಲ್ಲು ಗಣಿಗಾರಿಕೆ ಗುತ್ತಿಗೆಗಳು, ಗಣಿಗಾರಿಕೆ ಗುತ್ತಿಗೆಗಳು ಅಥವಾ ಇತರ ಖನಿಜ ರಿಯಾಯಿತಿಗಳ ಮಂಜೂರಾತಿಯನ್ನು ನಿಯಂತ್ರಿಸಿ ರಾಜ್ಯ ಸರ್ಕಾರವು ರಚಿಸಿದ್ದ ಯಾವುದೇ ನಿಯಮಗಳು ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು.

( 3) ( 1) ನೇ ಉಪ-ಪ್ರಕರಣದ ಅಡಿಯಲ್ಲಿ ರಚಿಸಿದ ಯಾವುದೇ ನಿಯಮದ ಅಡಿಯಲ್ಲಿ ಮಂಜೂರಾದ ಗಣಿಗಾರಿಕೆ ಗುತ್ತಿಗೆಗಳ ಅಥವಾ ಯಾವುದೇ ಇತರ ಖನಿಜ ರಿಯಾಯಿತಿಗಳ ಧಾರಕನು, ಉಪ ಖನಿಜಗಳ ಸಂಬಂಧದಲ್ಲಿ ರಾಜ್ಯ ಸರ್ಕಾರವು ರಚಿಸಿದ ನಿಯಮಗಳಲ್ಲಿ ತತ್ಕಾಲಕ್ಕೆ ನಿಯಮಿಸಿದ ದರದಲ್ಲಿ, ಆತನು ಅಥವಾ ಆತನ ಏಜೆಂಟ್, ವ್ಯವಸ್ಥಾಪಕ, ನೌಕರ, ಗುತ್ತಿಗೆದಾರ ಅಥವಾ ಉಪ-ಗುತ್ತಿಗೆದಾರನು ಹೊರತೆಗೆದ ಅಥವಾ ಬಳಸಿದ ಉಪ ಖನಿಜಗಳ ಸಂಬಂಧದಲ್ಲಿ ರಾಯಧನ ಅಥವಾ ಖಾಲಿ ಬಾಡಿಗೆ, ಯಾವುದು ಹೆಚ್ಚೋ ಅದನ್ನು ಸಂದಾಯ ಮಾಡತಕ್ಕದ್ದು:

ಪರಂತು, ಮೂರು ವರ್ಷಗಳ ಯಾವುದೇ ಅವಧಿಯಲ್ಲಿ ಒಂದಕ್ಕಿಂತ ಹೆಚ್ಚು ಸಲ ಯಾವುದೇ ಉಪ ಖನಿಜದ ಸಂಬಂಧಲ್ಲಿ ರಾಯಧನ ಚ ಅಥವಾ ಖಾಲಿ ಬಾಡಿಗೆ, ಇವುಗಳಲ್ಲಿ ಯಾವುದು ಹೆಚ್ಚೋ ಅದನ್ನು ರಾಜ್ಯ ಸರ್ಕಾರವು ಹೆಚ್ಚಿಸತಕ್ಕದ್ದಲ್ಲ.

( 4) ( 1), ( 2) ಮತ್ತು ( 3) ನೇ ಉಪಪಕರಣಗಳಿಗೆ ಬಾಧಕವಾಗದಂತೆ, ಈ ಮುಂದಿನ ವಿಷಯಗಳು, ಎಂದರೆ:

( ಎ) 9-ಬಿ ಪ್ರಕರಣದ ( 2) ನೇ ಉಪ-ಪ್ರಕರಣದ ಅಡಿಯಲ್ಲಿ ಗಣಿಗಾರಿಕೆ ಮೂಲಕ ಬಾಧಿತರಾದ ವ್ಯಕ್ತಿಗಳ ಮತ್ತು ಬಾಧಿತವಾದ ಪ್ರದೇಶಗಳ ಹಿತಾಸಕ್ತಿಗಾಗಿ ಮತ್ತು ಪ್ರಯೋಜನಕ್ಕಾಗಿ ಜಿಲ್ಲಾ ಖನಿಜ ಪ್ರತಿಷ್ಠಾನವು ಕಾರ್ಯನಿರ್ವಹಿಸತಕ್ಕ ರೀತಿ;

(ಬಿ) 9-ಬಿ ಪ್ರಕರಣದ (3) ನೇ ಉಪ-ಪ್ರಕರಣದ ಅಡಿಯಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನದ ರಚನೆ ಮತ್ತು ಪ್ರಕಾರಗಳು; ಮತ್ತು

(ಸಿ) 15- ಎ ಪ್ರಕರಣದ ಅಡಿಯಲ್ಲಿ ಉಪ ಖನಿಜಗಳ ರಿಯಾಯಿತಿ ಧಾರಕರು, ಜಿಲ್ಲಾ ಖನಿಜ ಪ್ರತಿಷ್ಠಾನಕ್ಕೆ ಸಂದಾಯ ಮಾಡಬೇಕಾದ ಹಣದ, ಸಂಬಂಧದಲ್ಲಿ ಈ ಅಧಿನಿಯಮದ ಉಪಬಂಧಗಳನ್ನು ವಿನಿಯಮಿಸಲು, ರಾಜ್ಯ ಸರ್ಕಾರವು ಅಧಿಸೂಚನೆ ಹೊರಡಿಸುವ ಮೂಲಕ ನಿಯಮಗಳನ್ನು ರಚಿಸಬಹುದು.

(ಗೆರೆ ಹಾಕಿದ್ದಕ್ಕೆ ಒತ್ತು ನೀಡಲಾಗಿದೆ)

19. ಹೀಗೆ, 1957 ರ ಸದರಿ ಅಧಿನಿಯಮದ 15 ನೇ ಪ್ರಕರಣದ ( 1) ನೇ ಉಪ-ಪ್ರಕರಣವು, ಕಲ್ಲು ಗಣಿಗಾರಿಕೆ ಗುತ್ತಿಗೆಗಳು, ಗಣಿಗಾರಿಕೆ ಗುತ್ತಿಗೆಗಳು ಅಥವಾ ಇತರ ಖನಿಜ ರಿಯಾಯಿತಿಗಳ ಮಂಜೂರಾತಿ ಮತ್ತು ತತ್ಸಂಬಂಧಿ ಉದ್ದೇಶಗಳನ್ನು ನಿಯಂತ್ರಿಸುವುದಕ್ಕಾಗಿ ರಾಜ್ಯ ಸರ್ಕಾರವು ನಿಯಮಗಳನ್ನು ರಚಿಸುವ ಅಧಿಕಾರವನ್ನು ಪ್ರದಾನ ಮಾಡುತ್ತದೆ.15 ನೇ ಪ್ರಕರಣದ ( 2) ನೇ ಉಪ-ಪ್ರಕರಣದ (ಜಿ) ಖಂಡವು, ಬಾಡಿಗೆ, ರಾಯಧನ, ಶುಲ್ಕ, ಖಾಲಿ ಬಾಡಿಗೆ, ಜುಲ್ಮಾನೆಗಳು ಅಥವಾ ಇತರ ಚಾರ್ಜುಗಳನ್ನು ನಿಗದಿಪಡಿಸುವ ಮತ್ತು ಸಂಗ್ರಹಿಸುವ ಹಾಗೂ ಅವುಗಳನ್ನು ಸಂದಾಯ ಮಾಡಬೇಕಾದ ಸಮಯ ಮತ್ತು ರೀತಿಯ ಸಂಬಂಧದಲ್ಲಿ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ಪ್ರದಾನ ಮಾಡುತ್ತದೆ.

20. 18 ನೇ ಡಿಸೆಂಬರ್, 1999 ರಿಂದ ಜಾರಿಗೆ ಬರುವಂತೆ, 1999 ರ ಅಧಿನಿಯಮಸಂಖ್ಯೆ: 38 ರ ಮೂಲಕ 1957 ರ ಸದರಿ ಅಧಿನಿಯಮದಲ್ಲಿ ಅಳವಡಿಸಿದ್ದಂಥ 23-ಸಿ ಪ್ರಕರಣದ (1) ನೇ ಉಪ-ಪ್ರಕರಣವನ್ನು ಈ ಕೆಳಗಿನಂತೆ ಓದಲಾಗಿದೆ:

" 23-ಸಿ.ಖನಿಜಗಳ ಅಕ್ರಮ ಗಣಿಗಾರಿಕೆ, ಸಾಗಣೆ ಮತ್ತು ದಾಸ್ತಾನನ್ನು ತಡೆಯುವುದಕ್ಕಾಗಿ ನಿಯಮಗಳನ್ನು ರಚಿಸುವ ರಾಜ್ಯ ಸರ್ಕಾರದ ಅಧಿಕಾರ.- ( 1) ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆ ಹೊರಡಿಸುವ ಮೂಲಕ ರಾಜ್ಯ ಸರ್ಕಾರವು, ಖನಿಜಗಳ ಅಕ್ರಮ ಗಣಿಗಾರಿಕೆ, ಸಾಗಣೆ ಮತ್ತು ದಾಸ್ತಾನನ್ನು ತಡೆಯಲು ಹಾಗೂ ಅದಕ್ಕೆ ಸಂಬಂಧಿಸಿದ ಉದ್ದೇಶಗಳಿಗಾಗಿ ನಿಯಮಗಳನ್ನು ರಚಿಸಬಹುದು.

(2) ನಿರ್ದಿಷ್ಟವಾಗಿ ಮತ್ತು ಹಿಂದಿನ ಅಧಿಕಾರದ ಸಾಮಾನ್ಯಾನ್ವಯತೆಗೆ ಬಾಧಕವಾಗದಂತೆ, ಈ ಮುಂದಿನ ಯಾವುದೇ ಅಥವಾ ಎಲ್ಲಾ ವಿಷಯಗಳ ಸಂಬಂಧದಲ್ಲಿ ಅಂಥ ನಿಯಮಗಳನ್ನು ರಚಿಸಬಹುದು, ಎಂದರೆ:

( ಎ) ಸಾಗಣೆಯಲ್ಲಿರುವ ಖನಿಜಗಳ ತಪಾಸಣೆಗಾಗಿ ತಪಾಸಣಾ ಕೇಂದ್ರಗಳ (ಚೆಕ್-ಪೋಸ್ಟ್) ಸ್ಥಾಪನೆ;

(ಬಿ) ಸಾಗಣೆ ಮಾಡಲಾಗುತ್ತಿರುವ ಖನಿಜದ ಪ್ರಮಾಣವನ್ನು ಅಳೆಯಲು ವೇ-ಬ್ರಿಡ್ಜ್‌ಗಳ ಸ್ಥಾಪನೆ;

(ಸಿ) ಖನಿಜಗಳನ್ನು ಹೊರತೆಗೆಯಲು ಯಾವುದೇ ಹೆಸರಿನಲ್ಲಿ ಪರವಾನಗಿಯನ್ನು ನೀಡಿರಲಿ, ಅನ್ವೇಷಣಾ ಲೈಸೆನ್ಸ್ ಅಥವಾ ಗಣಿಗಾರಿಕೆ ಗುತ್ತಿಗೆ ಅಥವಾ ಕಲ್ಲು ಗಣಿಕಾರಿಕೆ ಲೈಸೆನ್ಸ್ ಅಥವಾ ಪರವಾನಗಿಯ ಮೇರೆಗೆ ಮಂಜೂರು ಮಾಡಿದ ಪ್ರದೇಶದಿಂದ ಖನಿಜ ಸಾಗಣೆಯ ನಿಯಂತ್ರಣ;

(ಡಿ) ಖನಿಜ ಹೊರತೆಗೆಯುವ ಅಥವಾ ದಾಸ್ತಾನು ಮಾಡುವ ಸ್ಥಳದಲ್ಲಿ ಅಥವಾ ಸಾಗಣೆಯ ಸಮಯದಲ್ಲಿ ಖನಿಜಗಳ ತಪಾಸಣೆ, ಪರಿಶೀಲನೆ ಮತ್ತು ಶೋಧನೆ;

( ಇ) ಈ ನಿಯಮಗಳ ಉದ್ದೇಶಗಳಿಗಾಗಿ ರಿಜಿಸ್ಟರ್‌ಗಳ ಮತ್ತು ನಮೂನೆಗಳ ನಿರ್ವಹಣೆ;

(ಎಫ್) ಈ ಪ್ರಕರಣದ ಅಡಿಯಲ್ಲಿ ರಚಿಸಿದ ನಿಯಮದ ಮೇರೆಗೆ, ಯಾವುದೇ ಪ್ರಾಧಿಕಾರವು ಹೊರಡಿಸಿದ ಯಾವುದೇ ಆದೇಶದ ಪರಿಷ್ಕರಣೆಗಾಗಿ ಸಲ್ಲಿಸಲಾಗುವ ಅರ್ಜಿಗಳನ್ನು ಯಾವ ಅವಧಿಯೊಳಗೆ ಮತ್ತು ಯಾವ ಪ್ರಾಧಿಕಾರಕ್ಕೆ ಸಲ್ಲಿಸಬೇಕು ಹಾಗೂ ಅದಕ್ಕಾಗಿ ಸಂದಾಯ ಮಾಡಬೇಕಾದ ಶುಲ್ಕಗಳು ಮತ್ತು ಅಂಥ ಅರ್ಜಿಗಳ ವಿಲೆಗಾಗಿ ಅಂಥ ಪ್ರಾಧಿಕಾರದ ಅಧಿಕಾರಗಳು;

(ಜಿ) ಖನಿಜಗಳ ಅಕ್ರಮ ಗಣಿಗಾರಿಕೆ, ಸಾಗಣೆ ಮತ್ತು ದಾಸ್ತಾನನ್ನು ತಡೆಯುವ ಉದ್ದೇಶಕ್ಕಾಗಿ ನಿಯಮಿಸಬೇಕಾದ ಅಗತ್ಯವಿರುವ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ. "(ಗೆರೆ ಹಾಕಿದ್ದಕ್ಕೆ ಒತ್ತು ನೀಡಲಾಗಿದೆ)

21. ಗುಜರಾತ್ ಮತ್ತು ಇತರರು -ವಿರುದ್ಧ-ಜಯೇಶ್ಭಾಯಿ ಕಾಂಜಿಭಾಯಿ ಕಲಾತಿಯ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ, ಸದರಿ 1957 ರ ಅಧಿನಿಯಮದ 23-ಸಿ ಪ್ರಕರಣದ ಉಪಬಂಧಗಳೊಂದಿಗೆ ವ್ಯವಹರಿಸುವ ಸಂದರ್ಭ ಸರ್ವೋಚ್ಚ ನ್ಯಾಯಾಲಯಕ್ಕೆ ಒದಗಿಬಂದಿತ್ತು.ಗುಜರಾತ್ ಉಚ್ಚ ನ್ಯಾಯಾಲಯದ ಚ ನಿರ್ಣಯದಿಂದ ಅಪೀಲುಗಳು ಉದ್ಭವಿಸಿದ್ದು, ಅವುಗಳಲ್ಲಿ ಗುಜರಾತ್ ಉಪ ಖನಿಜಗಳ (ತಿದ್ದುಪಡಿ) ನಿಯಮಗಳು, 2010 ಮತ್ತು ಗುಜರಾತ್ ಉಪ ಖನಿಜ ನಿಯಮಗಳು, 1966 ರ 71 ನೇ ನಿಯಮದ ಮೂಲಕ ಸೇರಿಸಲಾಗಿದ್ದ 44-ಬಿಬಿ ನಿಯಮವನ್ನು ಪ್ರಶ್ನಿಸಲಾಗಿತ್ತು.ಸದರಿ ನಿರ್ಣಯದ 2 ನೇ ಮತ್ತು 3 ನೇ ಕಂಡಿಕೆಗಳಲ್ಲಿ ಉಲ್ಲೇಖಿಸಿರುವ 44-ಬಿಬಿ ಮತ್ತು 71 ನೇ ನಿಯಮಗಳನ್ನು ಈ ಕೆಳಗಿನಂತೆ ಓದಲಾಗಿದೆ:

" 44-ಬಿಬಿ:ರಾಜ್ಯದ ಗಡಿಯಾಚೆಗೆ ಮರಳಿನ ಸ್ಥಳಾಂತರಕ್ಕೆ ಅನುಮತಿಸತಕ್ಕದ್ದಲ್ಲ.ಯಾವುದೇ ವಾಹನವು ಅಕ್ಕಪಕ್ಕದ ರಾಜ್ಯಕ್ಕೆ ಮರಳನ್ನು ಸಾಗಣೆ ಮಾಡುವುದು ಕಂಡುಬಂದ ಸಂದರ್ಭದಲ್ಲಿ, ಅಧಿಕೃತ ರಾಯಧನ ರಹದಾರಿ ಚೀಟಿ (ಪಾಸ್) ಅಥವಾ ಸಾಗಣೆ ಚಲನ್ನೊಂದಿಗೆ ಇದ್ದರೂ ಸಹ, ಅದನ್ನು ಅಧಿನಿಯಮದ ಮತ್ತು ಅದರಡಿ ರಚಿಸಿದ ನಿಯಮಗಳ ಉಲ್ಲಂಘನೆ ಎಂದು ಪರಿಗಣಿಸಿ, ಅದರಲ್ಲಿ ನಿರ್ದಿಷ್ಟಪಡಿಸಿದಂತೆ ದಂಡನಾ ಉಪಬಂಧಗಳನ್ನು ಅನ್ವಯಿಸತಕ್ಕದ್ದು.

71. ಗಡಿಯಾಚೆಗೆ ಮರಳನ ಸಾಗಣೆಗೆ ನಿಷೇಧ.-ರಾಜ್ಯದ ಗಡಿಯಾಚೆಗೆ ಮರಳಿನ ಸ್ಥಳಾಂತರಕ್ಕೆ ಅನುಮತಿಸತಕ್ಕದ್ದಲ್ಲ.ಅಕ್ಕಪಕ್ಕದ ರಾಜ್ಯಕ್ಕೆ ಯಾವುದೇ ವಾಹನವು ಮರಳನ್ನು ಸಾಗಿಸುವುದು ಕಂಡುಬಂದ ಸಂದರ್ಭದಲ್ಲಿ, ಅಧಿಕೃತ ರಾಯಧನ ರಹದಾರಿ ಚೀಟಿ (ಪಾಸ್) ಅಥವಾ ಸಾಗಣೆ ಚಲನ್ನೊಂದಿಗೆ ಇದ್ದರೂ ಸಹ, ಅದನ್ನು ಅಧಿನಿಯಮದ ಮತ್ತು ಅದರಡಿ ರಚಿಸಿದ ನಿಯಮಗಳ ಉಲ್ಲಂಘನೆ ಎಂದು ಪರಿಗಣಿಸಿ, ರಾಜಿ ಮಾಡಿಕೊಳ್ಳುವುದನ್ನು ಹೊರತುಪಡಿಸಿ, ಅದರಲ್ಲಿ ನಿರ್ದಿಷ್ಟಪಡಿಸಿದಂತೆ ದಂಡನಾ ಉಪಬಂಧಗಳನ್ನು ಅನ್ವಯಿಸತಕ್ಕದ್ದು.

ರಾಜ್ಯ ಸರ್ಕಾರದ ನಿಯಮ ರಚನಾಧಿಕಾರವು, ಸಂವಿಧಾನದ 301 ನೇ ಅನುಚ್ಛೇದವು ಖಾತ್ರಿಪಡಿಸಿದ ಸ್ವಾತಂತ್ರ್ಯವನ್ನು ಅತಿಕ್ರಮಿಸುತ್ತದೆಯಾದ್ದರಿಂದ, ಖನಿಜಗಳ ಸ್ಥಳಾಂತರವನ್ನು ನೇರವಾಗಿ ನಿಷೇಧಿಸಿ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುವುದಿಲ್ಲ ಮತ್ತು ಅಧಿಕಾರ ನೀಡಲು

ಅನ್ವಯಿಸಲಾಗುವುದಿಲ್ಲ ಎಂಬ ಕಾರಣದ ಮೇಲೆ ಗುಜರಾತ್ ಉಚ್ಚ ನ್ಯಾಯಾಲಯವು ಮೇಲೆ ಹೇಳಿದ ನಿಯಮಗಳನ್ನು ತಳ್ಳಿಹಾಕಿತು.

22. ಗುಜರಾತ್ನ ಸದರಿ ಎರಡು ನಿಯಮಗಳಿಂದ ಕಂಡುಬರುವಂತೆ, ಅಧಿಕೃತ ರಾಯಧನ ರಹದಾರಿ ಚೀಟಿ (ಪಾಸ್) ಅಥವಾ ರವಾನೆ ಚಲನ್ ಸಹಿತ ಅಕ್ಕಪಕ್ಕದ ರಾಜ್ಯಗಳಿಗೆ ಗುಜರಾತ್ ರಾಜ್ಯದಿಂದ ಮರಳು ಸಾಗಣೆಯ ಮೇಲೆ ನಿಷೇಧವನ್ನು ಹೇರಲಾಗಿತ್ತೆಂಬುದು ತಿಳಿದುಬರುತ್ತದೆ.ಸದರಿ ಎರಡು ನಿಯಮಗಳು ಗುಜರಾತ್ ರಾಜ್ಯದ ಗಡಿಯಾಚೆಗೆ ಮರಳಿನ ಸ್ಥಳಾಂತರವನ್ನು ನಿಷೇಧಿಸುತ್ತವೆ.ಆಕ್ಷೇಪಣಾ ಹೇಳಿಕೆಯಲ್ಲಿ ಮತ್ತು ಅದಕ್ಕೆ ನೀಡಿದ ಕಾರಣಗಳಲ್ಲಿ, ಅಕ್ರಮ ಗಣಿಗಾರಿಕೆಯನ್ನು ತಡೆಯುವ ದೃಷ್ಟಿಯಿಂದ ಹೊಸ ಉಪಬಂಧವನ್ನು ಕಲ್ಪಿಸಲಾಗಿದೆ ಎಂದು ಹೇಳಲಾಗಿತ್ತು.ಪ್ರಶ್ನಿತ ನಿಯಮಗಳನ್ನು 1957 ರ ಸದರಿ ಅಧಿನಿಯಮದ 23-ಸಿ ಪ್ರಕರಣದ ಅಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ರಚಿಸಲಾಗಿದೆ ಎಂಬುದನ್ನು ಸದರಿ ತೀರ್ಪಿನ 9 ನೇ ಕಂಡಿಕೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ಟಿಪ್ಪಣಿ ಮಾಡಿದೆ.ಸರ್ವೋಚ್ಚ ನ್ಯಾಯಾಲಯದ ನಿರ್ಣಯದ 10 ನೇ ಮತ್ತು 11 ನೇ ಕಂಡಿಕೆಗಳು ಇದಕ್ಕೆ ಸುಸಂಗತವಾಗಿದ್ದು, ಅವುಗಳನ್ನು ಈ ಕೆಳಗಿನಂತೆ ಓದಲಾಗಿದೆ:

"10. ಮೇಲೆ ಹೇಳಿದ ಚರ್ಚೆಗೆ ಸಂಬಂಧಿಸಿದಂತೆ 15 ನೇ ಮತ್ತು 23-ಸಿ ಪ್ರಕರಣಗಳ ಅವಲೋಕನದಿಂದ, ನಿಯಮಗಳನ್ನು ರಚಿಸುವ ರಾಜ್ಯ ಸರ್ಕಾರದ ಅಧಿಕಾರವನ್ನು:

10.1 ಉಪ ಖನಿಜಗಳ ಸಂಬಂಧದಲ್ಲಿ ಕಲ್ಲು ಗಣಿಗಾರಿಕೆ ಗುತಿಗೆಗಳ, ಗಣಿಗಾರಿಕೆ ಗುತ್ತಿಗೆಗಳ ಅಥವಾ ಇತರ ಖನಿಜ ರಿಯಾಯಿತಿಗಳ ಮಂಜೂರಾತಿಗೆ ಮತ್ತು ಅದಕ್ಕೆ ಸಂಬಂಧಿಸಿದ ಉದ್ದೇಶಗಳಿಗೆ ನಿಯಮಗಳನ್ನು ರಚಿಸುವುದಕ್ಕೆ; ಮತ್ತು

10.2 ಖನಿಜಗಳ ಅಕ್ರಮ ಗಣಿಗಾರಿಕೆ, ಸಾಗಣೆ ಮತ್ತು ದಾಸ್ತಾನಿಗೆ ಹಾಗೂ ಅದಕ್ಕೆ ಸಂಬಂಧಿಸಿ ಉದ್ದೇಶಗಳಿಗೆ ನಿಯಮಗಳನ್ನು ರಚಿಸುವುದಕ್ಕೆ ನಿರ್ಬ ಂ ಧ ವಿಧಿಸಲಾಗಿದೆ ಎಂಬುದು ಸೂಚಿತವಾಗುತ್ತದೆ.

11. ಮೇಲೆ ಹೇಳಿದ ಸಂದರ್ಭದಲ್ಲಿ, ರಾಜ್ಯ ಸರ್ಕಾರದ ಮೇಲೆ ಶಾಸಕಾಂಗವು ಪ್ರತಿಯೋಜಿಸಿದ ಅಂಥ ಅಧಿಕಾರಗಳನ್ನು ಚಲಾಯಿಸಿ, ಉಪ ಖನಿಜವಾಗಿರುವ ಮರಳನ್ನು ಗುಜರಾತ್ ರಾಜ್ಯದ ಗಡಿಗಳಾಚೆಗೆ ತೆಗೆದುಕೊಂಡು ಹೋಗುವುದಕ್ಕೆ ಅವಕಾಶವಿದೆಯೇ ಮತ್ತು ಅಂಥ ಸ್ಥಳಾಂತರವನ್ನು ದಂಡನೀಯ ಅಪರಾಧವನ್ನಾಗಿಸ ಬೇಕೇ ಎಂಬುದಾಗಿ ಉಚ್ಚ ನ್ಯಾಯಾಲಯದ ಮುಂದೆ ಚ ಪ್ರಶ್ನಿಸಲಾಗಿತ್ತು.ಉಚ್ಚ ನ್ಯಾಯಾಲಯದ ಪ್ರಕಾರ, ಮೇಲೆ ಹೇಳಿದ ಉಪಬಂಧಗಳ ಅಡಿಯಲ್ಲಿ ರಾಜ್ಯ ಸರ್ಕಾರಕ್ಕೆ ಅಧಿಕಾರಗಳ ಪ್ರತಿಯೋಜನೆಯು ಅ0ತರ್-ರಾಜ್ಯ ವ್ಯಾಪಾರ, ವಾಣಿಜ್ಯ ಮತ್ತು ವ್ಯವಹಾರ ಸಂಪರ್ಕಗಳನ್ನು ಒಳಗೊಂಡಿರುವುದಿಲ್ಲ ಅಥವಾ ಯೋಜಿಸಿರುವುದಿಲ್ಲ ಮತ್ತು ಅದು ಮುಕ್ತವಾಗಿರತಕ್ಕದ್ದು.ಹೀಗೆ, ಪ್ರಶ್ನಿತ ನಿಯಮಗಳನ್ನು ಗಣಿಗಳ ಮತ್ತು ಖನಿಜಗಳ (ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮದ 15 ನೇ ಮತ್ತು 23-ಸಿ ಪ್ರಕರಣಗಳ ಉಪಬಂಧಗಳಿಗೆ ವಿರುದ್ಧವಾಗಿವೆಯೆಂದು ನಿರ್ಣಯಿಸಲಾಯಿತು.ಅವು ಭಾರತ ಸಂವಿಧಾನದ 301 ನೇ ಅನುಚ್ಛೇದದ ಉಲ್ಲಂಘನೆಯಾಗಿವೆ ಎಂದು ಸಹ ನಿರ್ಣಯಿಸಲಾಯಿತು. "

23. ನಿವೇದನೆಗಳನ್ನು ಕುರಿತು ವ್ಯವಹರಿಸುವಾಗ, ಸರ್ವೋಚ್ಚ ನ್ಯಾಯಾಲಯವು 34.1 ನೇ ಮತ್ತು 34.2 ನೇ ಕಂಡಿಕೆಗಳಲ್ಲಿ ನಮೂದಿಸಿರುವ ಎರಡು ಪ್ರಶ್ನೆಗಳನ್ನು ರೂಪಿಸಿದ್ದು, ಅವುಗಳನ್ನು ಈ ಹೀಗೆ ಓದಲಾಗಿದೆ:

" 34.1.ಸಂಸತ್ತಿನ ಪ್ರತಿನಿಧಿಯಾಗಿ ಗುಜರಾತ್ ಸರ್ಕಾರವು ರಚಿಸಿದ ಪ್ರಶ್ನಿತ ನಿಯಮಗಳು, ಗಣಿಗಳ ಮತ್ತು ಖನಿಜಗಳ (ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮದ ಅಡಿಯಲ್ಲಿ ಅದಕ್ಕೆ ನೀಡಿದ ಅಧಿಕಾರಗಳನ್ನು ಮೀರಿವೆಯೇ?ಇನ್ನೊಂದು ರೀತಿಯಲ್ಲಿ, ಪ್ರಶ್ನಿತ ನಿಯಮಗಳು, ಗಣಿಗಳ ಮತ್ತು ಖನಿಜಗಳ (ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮದ 15 ನೇ, 15- ಎ ಮತ್ತು 23 ನಿಯಮಗಳಿಗೆ ವಿರುದ್ಧವಾಗಿವೆಯೇ?

34.2.ಪ್ರಶ್ನಿತ ನಿಯಮಗಳು ಭಾರತ ಸಂವಿಧಾನದ XIII ನೇ ಭಾಗದ ಉಲ್ಲಂಘನೆಯೇ? "

24. ಸರ್ವೋಚ್ಚ ನ್ಯಾಯಾಲಯವು, ತಮಿಳುನಾಡು ರಾಜ್ಯ ವಿರುದ್ಧ ಚ ಎಂ.ಪಿ.ಪಿ. ಕಾವೇರಿ ಚೆಟ್ಟಿ-(1995) 2 ಎಸ್ಸಿಸಿ 402  ಮೊಕದ್ದಮೆಯಲ್ಲಿನ ತನ್ನ ಮೊದಲಿನ ತೀರ್ಪನ್ನು ಸಹ ಪರಿಗಣಿಸಿದೆ.ಸದರಿ ತೀರ್ಪನ್ನು ಕುರಿತು ವ್ಯವ ಹರಿಸುವಾಗ, ಸರ್ವೋಚ್ಚ ನ್ಯಾಯಾಲಯವು 42 ನೇ ಕಂಡಿಕೆಯಲ್ಲಿ ಹೀಗೆ ಅಭಿಪ್ರಾಯಪಟ್ಟಿದೆ:

"42. ಈ ಸಂದರ್ಭದ ಹಿನ್ನೆಲೆಯಲ್ಲಿ, 23-ಸಿ ಪ್ರಕರಣದಲ್ಲಿನ 11 " ಸಾಗಣೆ " ಮತ್ತು " ದಾಸ್ತಾನು " ಪದಗಳನ್ನು ಅರ್ಥೈಸಬೇಕಾಗುತ್ತದೆ.ಇಲ್ಲಿ, ಈ ಎರಡು ಪದಗಳನ್ನು ಅಕ್ರಮ ಗಣಿಗಾರಿಕೆಯ ಸಂದರ್ಭದಲ್ಲಿ ಬಳಸಲಾಗಿದೆ.ಇದು, ಅಕ್ರಮ ಗಣಿಗಾರಿಕೆಯ ಉತ್ಪನ್ನಗಳ ಸಾಗಣೆ ಮತ್ತು ದಾಸ್ತಾನಿಗೆ ಸಂಬಂಧಿಸಿದೆಯೇ ಹೊರತು, ಕಾನೂನುಬದ್ಧವಾಗಿರುವ ಮತ್ತು ಯುಕ್ತ ಲೈಸೆನ್ ಮ ಂ ಜೂರಾತಿಯಿಂದ ಸಮರ್ಥಿತವಾದ ಮರಳಿನಂಥ ಖನಿಜಗಳ ಗಣಿಗಾರಿಕೆ ಅಲ್ಲವೆಂಬುದು ಸ್ಪಷ್ಟವಾಗುತ್ತದೆ ಮತ್ತು ಅದನ್ನು ಈ ಉಪಬಂಧದ ಮೂಲಕ ನಿಯಂತ್ರಿಸಬಹುದಾಗಿದೆ.ಆದುದರಿಂದ, ಕಾನೂನುಬದ್ಧವಾಗಿ ಹೊರತೆಗೆದ ಖನಿಜಗಳ ಸಾಗಣೆಯನ್ನು ನಿಯಂತ್ರಿಸುವ ಸಂಬಂಧದಲ್ಲಿ ನಿಯಮಗಳನ್ನು ರಚಿಸಲು ಈ ಉಪಬ ಂ ಧದಿ ಂ ದ ಯಾವುದೇ ಅಧಿಕಾರ ದೊರಕುವುದಿಲ್ಲ. "

(ಗೆರೆ ಹಾಕಿದ್ದಕ್ಕೆ ಒತ್ತು ನೀಡಲಾಗಿದೆ)

ಆದ್ದರಿಂದ, 1957 ರ ಸದರಿ ಅಧಿನಿಯಮದ 23-ಸಿ ಪ್ರಕರಣದಲ್ಲಿ ಬಳಸಿದ ' ಸಾಗಣೆ ' ಮತ್ತು ' ದಾಸ್ತಾನು ' ಪದಗಳನ್ನು, ಅಕ್ರಮ ಗಣಿಗಾರಿಕೆಯ ಸಂದರ್ಭದಲ್ಲಿ ಬಳಸಲಾಗಿದೆಯೇ ಹೊರತು, ಕಾನೂನುಬದ್ಧವಾಗಿರುವ ಮತ್ತು ಯುಕ್ತ ಲೈಸನ್ಸ್ ಮಂಜೂರಾತಿಯಿಂದ ಸಮರ್ಥಿತವಾಗಿರುವ ಮರಳಿನಂಥ ಉಪ ಖನಿಜಗಳ ಗಣಿಕಾರಿಕೆಗೆ ಅಲ್ಲವೆಂದು ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ.ಆದ್ದರಿಂದ, 1957 ರ ಚ ಸದರಿ ಅಧಿನಿಯಮದ 23-ಸಿ ಪ್ರಕರಣದ ಮೇರೆಗೆ, ಕಾನೂನುಬದ್ಧವಾಗಿ ಹೊರತೆಗೆದ ಖನಿಜಗಳ ಸಾಗಣೆಯನ್ನು ನಿಯಂತ್ರಿಸುವುದಕ್ಕಾಗಿ ನಿಯಮ ರಚಿಸಲು ರಾಜ್ಯಕ್ಕೆ ಯಾವುದೇ ಅಧಿಕಾರ ನಿಹಿತವಾಗಿಲ್ಲವೆಂದು ಸರ್ವೋಚ್ಚ ನ್ಯಾಯಾಲಯವು ನಿರ್ದಿಷ್ಟವಾಗಿ ಅಭಿಪ್ರಾಯಪಟ್ಟಿದೆ.

25. ಪ್ರಸ್ತುತ ಅರ್ಜಿಗಳಲ್ಲಿ ಪ್ರಶ್ನಿತ ಉಪ-ನಿಯಮವನ್ನು ಎಚ್ಚರಿಕೆಯಿಂದ ಅವಲೋಕಿಸಿದಾಗ, ಅದು ಸಿಂಧುವಾದ ಪರವಾನಗಿಯೊಂದಿಗೆ ಇತರ ರಾಜ್ಯಗಳಿಂದ ಸಂಸ್ಕರಿತ ಕಟ್ಟಡ ನಿರ್ಮಾಣದ ಕಲ್ಲಿನ ಸಾಮಗ್ರಿಗಳ ಸಾಗಣೆಯನ್ನು ಕುರಿತು ಮಾತ್ರವೇ ವ್ಯವಹರಿಸುತ್ತದೆಂಬುದು ಕಂಡುಬರುತ್ತದೆ.ಅದು, ಸಿಂಧುವಾದ ಪರವಾನಗಿಯೊಂದಿಗೆ ಇತರ ರಾಜ್ಯಗಳಿಂದ ಕರ್ನಾಟಕ ರಾಜ್ಯಕ್ಕೆ ಪ್ರಶ್ನಿತ ಉಪ-ನಿಯಮದಲ್ಲಿ ಉಲ್ಲೇಖಿಸಿದಂತೆ ಸಂಸ್ಕರಿತ ಕಟ್ಟಡ ನಿರ್ಮಾಣದ ಕಲ್ಲಿನ ಸಾಮಗ್ರಿಗಳನ್ನು ಸಾಗಣೆ ಮಾಡುವ ವ್ಯಕ್ತಿಯಿಂದ ಪ್ರತಿ ಮೆಟ್ರಿಕ್ ಟನ್ನೆ 70/ ರೂ.ಗಳ ಮೊತ್ತದ ಶುಲ್ಕವನ್ನು ವಿಧಿಸಲು

ಉಪಬಂಧ ಕಲ್ಪಿಸುತ್ತದೆ.ಹಾಗಾಗಿ, ಪ್ರಶ್ನಿತ ಉಪ-ನಿಯಮದ ಮೇರೆಗೆ, ಇತರ ರಾಜ್ಯಗಳಿಂದ ಕರ್ನಾಟಕ ರಾಜ್ಯದೊಳಗೆ ಕಾನೂನುಬದ್ಧವಾಗಿ ಹೊರತೆಗೆದ ಕಟ್ಟಡ ನಿರ್ಮಾಣ ಸಂಬಂಧಿ ಕಲ್ಲುಗಳ ಸಾಗಣೆಯ ಮೇಲೆ ಶುಲ್ಕವನ್ನು ವಿಧಿಸಲಾಗುತ್ತದೆ.

26. 23-ಸಿ ಪ್ರಕರಣದ ( 2) ನೇ ಉಪ-ಪ್ರಕರಣದ ( ಎ) ಖಂಡವು, ಸಾಗಣೆಯಲ್ಲಿರುವ ಖನಿಜಗಳ ತಪಾಸಣೆಗಾಗಿ ತಪಾಸಣಾ-ಕೇಂದ್ರಗಳನ್ನು (ಚೆಕ್-ಪೋಸ್ಟ್) ಸ್ಥಾಪಿಸುವ ನಿಟ್ಟಿನಲ್ಲಿ ನಿಯಮಗಳನ್ನು ರಚಿಸುವುದಕ್ಕೆ ಉಪಬಂಧ ಕಲ್ಪಿಸುತ್ತದೆ.ಖನಿಜಗಳ ಸಾಗಣೆಯ ನಿಯಂತ್ರಣಕ್ಕೆ ಸಂಬಂಧಪಡುವಷ್ಟರಮಟ್ಟಿಗೆ, 23-ಸಿ ಪ್ರಕರಣದ ( 2) ನೇ ಉಪ-ಪ್ರಕರಣದ (ಸಿ) ಖಂಡದ ಮೇರೆಗೆ ನಿಯಮ ರಚಿಸುವ ಅಧಿಕಾರವಿದೆ.(ಸಿ) ಖಂಡವು, ಖನಿಜಗಳ ಶೋಧನಾ ಲೈಸೆನ್ಸ್ ಅಥವಾ ಗಣಿಗಾರಿಕೆ ಗುತ್ತಿಗೆ ಅಥವಾ ಕಲ್ಲು ಗಣಿಗಾರಿಕೆ ಲೈಸೆನ್ಸ್ ಅಥವಾ ಪರವಾನಗಿಯ ಮೇರೆಗೆ ಮಂಜೂರಾದ ಪ್ರದೇಶದಿಂದ ಸಾಗಣೆ ಮಾಡಲಾಗುವ ಖನಿಜಗಳನ್ನು ಕುರಿತಾಗಿದೆ.ಹಾಗಾಗಿ, (ಸಿ) ಖಂಡವು, ರಾಜ್ಯದೊಳಗಿನ ಭೂಮಿಗಳಿಂದ ಕಾನೂನುಬದ್ಧವಾಗಿ ಹೊರತೆಗೆದ ಖನಿಜಗಳ ಸಾಗಣೆ ಸಂಬಂಧದಲ್ಲಿ ನಿಯಮಗಳನ್ನು ರಚಿಸುವ ಅಧಿಕಾರವನ್ನು ನೀಡುತ್ತದೆ.ಸಹಜವಾಗಿಯೇ, (ಸಿ) ಖಂಡವು, ರಾಜ್ಯದೊಳಗೆ ಖನಿಜಗಳನ್ನು ಅಕ್ರಮವಾಗಿ ಹೊರತೆಗೆಯುವ ಮತ್ತು ಅಥವಾ ಅಕ್ರಮವಾಗಿ ಸಾಗಣೆ ಮಾಡುವ ಸಂದರ್ಭಗಳಲ್ಲಿ ತಪಾಸಣೆ ಮಾಡುವ ಉದ್ದೇಶಕ್ಕಾಗಿ ತಪಾಸಣಾ ಕೇಂದ್ರಗಳನ್ನು (ಚೆಕ್-ಪೋಸ್ಟ್) ಸ್ಥಾಪಿಸುವುದನ್ನು ಉಲ್ಲೇಖಿಸುತ್ತದೆ.1957 ರ ಸದರಿ ಅಧಿನಿಯಮದ 23-ಸಿ ಪ್ರಕರಣದ ಮೇರೆಗೆ, ಇತರ ರಾಜ್ಯಗಳಿಂದ ಅಕ್ರಮವಾಗಿ ಹೊರತೆಗೆದ ಖನಿಜಗಳ ಸಾಗಣೆಯ ನಿಯಂತ್ರಣಕ್ಕೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರವು ಅಧಿಕಾರ ಹೊಂದಿರುವುದಿಲ್ಲ.ಇತರ ರಾಜ್ಯಗಳಿಂದ ಅಕ್ರಮವಾಗಿ ಹೊರತೆಗೆದ ಖನಿಜಗಳನ್ನು ಸಾಗಣೆ ಮಾಡುವ ವ್ಯಕ್ತಿಯಿಂದ ಪ್ರತಿ ಮೆಟ್ರಿಕ್ ಟನ್ನ್‌ಗೆ 70/- ರೂ.ಗಳ ದರದಲ್ಲಿ ಪ್ರವೇಶ ಶುಲ್ಕದ ರೂಪದಲ್ಲಿ ಶುಲ್ಕ ಸಂಗ್ರಹಿಸಲು ಪ್ರಶ್ನಿತ ಉಪ-ನಿಯಮವು ವ್ಯಕ್ತವಾಗಿ ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

27. ರಾಜ್ಯ ಸರ್ಕಾರವು, ತನ್ನ ಆಕ್ಷೇಪಣೆಗಳ ಹೇಳಿಕೆಯಲ್ಲಿ ಮೊದಲನೆಯದಾಗಿ, ಪ್ರಶ್ನಿತ ಉಪ-ನಿಯಮವನ್ನು ಸಮರ್ಥಿಸಲು 15 ನೇ ಪ್ರಕರಣದ ಉಪಬಂಧಗಳನ್ನು ಅವಲಂಬಿಸಿದೆ.15 ನೇ ಪ್ರಕರಣದ ( 2) ನೇ ಉಪ-ಪ್ರಕರಣದ (ಜಿ) ಖಂಡವು ಬಾಡಿಗೆ, ರಾಯಧನ, ಶುಲ್ಕ, ಖಾಲಿ ಬಾಡಿಗೆ, ಜುಲ್ಮಾನೆ ಅಥವಾ ಇತರ ಚಾರ್ಜುಗಳನ್ನು ನಿಗದಿಪಡಿಸುವುದಕ್ಕೆ ಮತ್ತು ಸಂಗ್ರಹಿಸುವುದಕ್ಕೆ ನಿಯಮಗಳನ್ನು ರಚಿಸಲು ನಿಯಮ ರಚನಾಧಿಕಾರವನ್ನು ಪ್ರದಾನ ಮಾಡುತ್ತದೆ.ಸಹಜವಾಗಿಯೇ, (ಜಿ) ಖಂಡವು, ರಾಜ್ಯದೊಳಗೆ ಹೊರತೆಗೆದ ಉಪ ಖನಿಜಗಳ ಮೇಲೆ ರಾಯಧನ, ಶುಲ್ಕ, ಖಾಲಿ ಬಾಡಿಗೆ, ಜುಲ್ಮಾನೆಗಳು ಅಥವಾ ಇತರ ಚಾರ್ಜುಗಳನ್ನು ಸಂಗ್ರಹಿಸುವುದನ್ನು ಉಲ್ಲೇಖಿಸುತ್ತದೆ.ಈ ಉಪಬಂಧವು, ಇತರ ರಾಜ್ಯಗಳಲ್ಲಿ ಕಾನೂನುಬದ್ಧವಾಗಿ ಹೊರತೆಗೆದ ಉಪ ಖನಿಜಗಳ ಮೇಲೆ ರಾಯಧನ, ಶುಲ್ಕ, ಖಾಲಿ ಬಾಡಿಗೆ, ಜುಲ್ಮಾನೆ ಅಥವಾ ಇತರ ಚಾರ್ಜುಗಳ ಸಂಗ್ರಹಣೆ ಸಂಬಂಧದಲ್ಲಿ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ನಿಯಮ ರಚನಾಧಿಕಾರವನ್ನು ಪ್ರದಾನ ಮಾಡುವುದಿಲ್ಲ.15 ನೇ ಪ್ರಕರಣದ ( 1) ನೇ ಉಪ-ಪ್ರಕರಣದ ( ಒ) ಖಂಡವು, ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ವಿಷಯದ ಸಂಬಂಧದಲ್ಲಿ ನಿಯಮ ರಚಿಸುವ ಅಧಿಕಾರವನ್ನು ನೀಡುತ್ತದೆ.1957 ರ ಸದರಿ ಅಧಿನಿಯಮದ 2 ನೇ ಪ್ರಕರಣದ (ಎಫ್) ಖಂಡವು, " ನಿಯಮಿಸಲಾದ " ಪದವನ್ನು ನಿಯಮಗಳ ಮೂಲಕ ನಿಯಮಿಸಲಾದ ಎಂಬುದಾಗಿ ಪರಿಭಾಷಿಸುತ್ತದೆ.ಆದುದರಿಂದ, ನಿಯಮಗಳನ್ನು ರಚಿಸಬಹುದಾಗಿರುವ ವಸ್ತು ವಿಷಯವನ್ನು ನಿಯಮಿಸುವ ನಿಯಮವಿದ್ದಾಗ (ಒ) ಖಂಡವನ್ನು ಅನ್ವಯಿಸಬಹುದಾಗಿದೆ.15 ನೇ ಪ್ರಕರಣದ ( 1) ನೇ ಉಪ-ಪ್ರಕರಣವು, ಉಪ ಖನಿಜಗಳ ಸಂಬಂಧದಲ್ಲಿ ಕಲ್ಲು ಗಣಿಗಾರಿಕೆ ಗುತ್ತಿಗೆಗಳ, ಗಣಿಗಾರಿಕೆ ಗುತ್ತಿಗೆಗಳ ಮತ್ತು ಇತರ ಗಣಿಗಾರಿಕೆ ರಿಯಾಯಿತಿಗಳ ಮಂಜೂರಾತಿಯನ್ನು ಮತ್ತು ಅದಕ್ಕೆ ಸಂಬಂಧಿಸಿದ ಇತರ ಉದ್ದೇಶಗಳನ್ನು ನಿಯಂತ್ರಿಸುವದಕ್ಕಾಗಿ ನಿಯಮಗಳನ್ನು ರಚಿಸುವ ಅಧಿಕಾರವನ್ನು ಸಹ ಪ್ರದಾನ ಮಾಡುತ್ತದೆ.ಕರ್ನಾಟಕ ರಾಜ್ಯದೊಳಗಿನ ಗಣಿಗಾರಿಕೆ ಅಥವಾ ಕಲ್ಲು ಗಣಿಗಾರಿಕೆಯನ್ನು ಕುರಿತು

ವ್ಯವಹರಿಸುವುದಕ್ಕಾಗಿ ಈ ಅಧಿಕಾರವನ್ನು ಚಲಾಯಿಸಲಾಗುವುದಿಲ್ಲ.ಈ ಉಪಬಂಧವು, ಇತರ ರಾಜ್ಯಗಳಲ್ಲಿ ಕಾನೂನುಬದ್ಧವಾಗಿ ಹೊರತೆಗೆದ ಉಪ ಖನಿಜಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುವುದಿಲ್ಲ.23-ಸಿ ಪ್ರಕರಣದ ಉಪಬಂಧವು, ಉಪ ಖನಿಜಗಳಿಗೆ ಮಾತ್ರವಲ್ಲದೆ, ಖನಿಜಗಳ ಎಲ್ಲಾ ಪ್ರವರ್ಗಗಳಿಗೂ ಅನ್ವಯವಾಗುತ್ತದೆ ಎಂಬುದನ್ನು ಇಲ್ಲಿ ಗಮನಿಸುವುದು ಸುಸಂಗತವಾಗಿದೆ.ಆದುದರಿಂದ, 15 ನೇ ಪ್ರಕರಣ ಮತ್ತು 23-ಸಿ ಪ್ರಕರಣಗಳೆರಡರ ಉಪಬಂಧಗಳು, ಇತರ ರಾಜ್ಯಗಳಲ್ಲಿ ಕಾನೂನುಬದ್ಧವಾಗಿ ಹೊರತೆಗೆದ ಖನಿಜಗಳ ಸಾಗಣೆಯನ್ನು ನಿಯಂತ್ರಿಸುವ ಸಂಬಂಧದಲ್ಲಿ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುವುದಿಲ್ಲ.

28. ಆಕ್ಷೇಪಣೆಗಳ ಹೇಳಿಕೆಯ 5 ನೇ ಕಂಡಿಕೆಯಲ್ಲಿ, ರಾಜ್ಯ ಸರ್ಕಾರವು ಪ್ರಶ್ನಿತ ಉಪ-ನಿಯಮದ ಪ್ರಸ್ತಾವನೆಯನ್ನು ಸಮರ್ಥಿಸಲು 23-ಸಿ ಪ್ರಕರಣದಿಂದ ಸಮರ್ಥನೆಯನ್ನು ಪಡೆದಿದೆ.ಆಕ್ಷೇಪಣೆಗಳ ಹೇಳಿಕೆಯ 6 ರಿಂದ 9 ನೇ ಕಂಡಿಕೆಗಳಲ್ಲಿ ಮಾಡಿರುವ ವಾದಗಳು ಸುಸಂಗತವಾಗಿದ್ದು, ಅವುಗಳನ್ನು ಈ ಕೆಳಗಿನಂತೆ ಓದಲಾಗಿದೆ:

"6. ಕರ್ನಾಟಕದಲ್ಲಿ, ರಾಜ್ಯದೊಳಗೆ ಗುತ್ತಿಗೆ ಹೊಂದಿದವರಿಗೆ ಖನಿಜಗಳ ರವಾನೆಯ ಪರವಾನಗಿಗಳನ್ನು ನೀಡುವ ಇಡೀ ವ್ಯವಸ್ಥೆಯು ತಂತ್ರಜ್ಞಾನಾಧಾರಿತವಾಗಿದ್ದು, ಕಲ್ಲುಗಣಿಗಾರಿಕೆ ವಸ್ತುಗಳ ಅಕ್ರಮ ರವಾನೆಯನ್ನು ಗರಿಷ್ಠ ಮಟ್ಟಕ್ಕೆ ಕಡಿಮೆಗೊಳಿಸುವದನ್ನು ಸುನಿಶ್ಚಿತಪಡಿಸಿಕೊಳ್ಳಲು ಕೆಲವು ಹೆಚ್ಚುವರಿ ಸುರಕ್ಷತೆಗಳನ್ನು ಅಳವಡಿಸಿಕೊಳ್ಳಲಾಗಿದೆ.ಆದಾಗ್ಯೂ, ರಾಜ್ಯದ ಹೊರಗಿನಿಂದ ದೊಡ್ಡ ಪ್ರಮಾಣದಲ್ಲಿ ಖನಿಜಗಳು ಸಾಗಾಣಿಯಾಗುತ್ತಿದ್ದು, ಈ ಕಾರಚಟುವಟಿಕೆಯ/ಸಾಗಣೆಯ ಮೇಲೆ ನಿಗಾವಹಿಸಲು ಸೂಕ್ತ ಕಾವ್ಯವ್ಯವಸ್ಥೆ ಇಲ್ಲ. ತತ್ಪರಿಣಾಮವಾಗಿ, ರಾಜ್ಯದ ಹೊರಗಿನಿಂದ ಅಕ್ರಮವಾಗಿ ಹೊರತೆಗೆದ ಖನಿಜಗಳನ್ನು ಗುರುತಿಸುವಲ್ಲಿ ತೀವ್ರ ತೊಂದರೆಗಳುಂಟಾಗುತ್ತಿವೆ ಎಂಬುದು ಗಮನಕ್ಕೆ ಬಂದಿತ್ತು.ಇತರ ರಾಜ್ಯಗಳಲ್ಲಿ ನೀಡಿದ ಪರವಾನಗಿಗಳು, ಸಾಮಾನ್ಯವಾಗಿ, ಕಾಗದ-ಪತ್ರಗಳನ್ನಾಧರಿಸಿದ್ದು, ಸರಕುಗಳ ಸ್ಥಳಾಂತರಕ್ಕೆ ಸಂಬಂಧಿಸಿದ ಪ್ರವೇಶ ವಿವರಗಳನ್ನು ಭರ್ತಿ ಮಾಡಲು ಪರವಾನಗಿದಾರನಿಗೆ ಬಿಟ್ಟುಬಿಡಲಾಗುತ್ತಿದೆ.ಅವೇ ಪರವಾನಗಿಗಳನ್ನು/ಸಾಗಣೆ ರಹದಾರಿ ಚೀಟಿಗಳನ್ನು (ಪಾಸ್) ಪುನರಾವರ್ತಿತವಾಗಿ ಬಳಸಲಾಗುತ್ತಿದೆ ಎಂಬುದು ರಾಜ್ಯದ ಅನುಭವಕ್ಕೆ ಬಂದಿದೆ.ಒಮ್ಮೆ ವಾಹನವು ರಾಜ್ಯದೊಳಗೆ ಪ್ರವೇಶಿಸಿದರೆ, ಸಾಮಗ್ರಿಗಳ ಸಾಗಾಣಿಕೆಯನ್ನು ಅಥವಾ ಉಪ ಖನಿಜವು ಸರಕು ಪಡೆಯುವವನಿಗೆ ಈಗಾಗಲೇ ರವಾನಿಸಿದ್ದರೆ, ಅದನ್ನು ಪತ್ತೆ ಮಾಡುವ ಯಾವ ವಿಧಾನವು ಇರುವುದಿಲ್ಲ.

ಪರವಾನಗಿಗಳನ್ನು ನೀಡುವ ಸಂಬಂಧದಲ್ಲಿ ಯಾವುದೇ ಏಕರೂಪದ ಕಾರವ್ಯವಸ್ಥೆ ಇರದೆ, ಪ್ರತಿಯೊಂದು ರಾಜ್ಯವು ತನ್ನದೇ ಆದ ವಿಧಾನವನ್ನು ಅನುಸರಿಸುತ್ತಿರುವುದರಿಂದ, ಅವೇ ಪರವಾನಗಿಗಳನ್ನಾ ಧರಿಸಿದಂಥ ಕಾನೂನುಬದ್ಧವಾಗಿ ಸಾಗಣೆ ಮಾಡುತ್ತಿರುವ ಸಾಮಗ್ರಿಗಳು ಮತ್ತು ಅಕ್ರಮವಾಗಿ ಸಾಗಣೆ ಮಾಡುತ್ತಿರುವಂಥ ಸಾಮಗ್ರಿಗಳ ನಡುವೆ ವ್ಯತ್ಯಾಸ ಗುರುತಿಸುವುದು ಅತ್ಯಂತ ಕಷ್ಟಕರವಾಗುತ್ತಿರುವುದು ಸಾಬೀತಾಗುತ್ತಿದೆ.ರಿಟ್ ಅರ್ಜಿಗೆ ಅನುಬಂಧಗಳಾಗಿ ಸ್ವತಃ ಅರ್ಜಿದಾರರು ಹಾಜರುಪಡಿಸಿದ ಸಾಗಣೆ ರಹದಾರಿ (ಪಾಸ್) ಗಳಿಂದ, ಅವಶ್ಯಕ ನಿಯಮಾವಳಿಗಳಿಲ್ಲದೆ ರಾಜ್ಯದ ಹೊರಗಿನಿಂದ ಬರುವ ವಾಹನಗಳ ಚಲನವಲನವನ್ನು ಗುರುತಿಸುವುದು ಮತ್ತು ನಿಗಾ ವಹಿಸುವುದು ಅತ್ಯಂತ ಕಷ್ಟಕರವಾದ ಕೆಲಸವಾಗಿದೆ ಎಂಬುದು ಕಂಡುಬರುತ್ತಿದ್ದು, ಇದು ಉಪ ಖನಿಜಗಳ ಅಕ್ರಮ ಸಾಗಣಿ ಕೆಯನ್ನು ತಡೆಯುವ ರಾಜ್ಯದ ಪ್ರಯತ್ನಗಳಿಗೆ ಹಿನ್ನೆಡೆಯಾಗಿರುವುದಷ್ಟೇ ಅಲ್ಲದೆ, ರಾಜ್ಯದೊಳಗೆ ಅಕ್ರಮ ಕಲ್ಲು ಗಣಿಗಾರಿಕೆಗೂ ಅವಕಾಶ ನೀಡುತ್ತಿದೆ.

7. ಈ ಸಂಬಂಧದಲ್ಲಿ, ರಾಜ್ಯದೊಳಗೆ ಕರ್ನಾಟಕ ರಾಜ್ಯದ ಹೊರಗಿನಿಂದ ಖನಿಜಗಳ ಅಕ್ರಮ ಸಾಗಾಣಿಕೆಯನ್ನು ತಪಾಸಣೆ ಮಾಡುವ ಸಲುವಾಗಿ ಹಾಗೂ ಪರವಾನಗಿಗಳನ್ನು ಪರಿಶೀಲಿಸಲು ಮತ್ತು

ರಾಜ್ಯ ಹೊರಗೆ ನೀಡಲಾದ ಪರವಾನಗಿಗಳ/ಸಾಗಣೆ ರಹದಾರಿಗಳ (ಪಾಸ್) ಆಧಾರದ ಮೇಲೆ ರಾಜ್ಯದ ಒಳಗೆ ಉಪ ಖನಿಜದ ಅಕ್ರಮ ಸಾಗಣೆ ನಡೆಯುತ್ತಿಲ್ಲವೆಂಬುದನ್ನು ಸುನಿಶ್ಚಿತಪಡಿಸಿಕೊಳ್ಳಲು, ಸರ್ಕಾರವು ರಾಜ್ಯದಲ್ಲಿನ ವಿವಿಧ ಸ್ಥಳಗಳಲ್ಲಿ ಇದಕ್ಕಾಗಿ ಮೀಸಲಾದ ತಪಾಸಣಾ ಕೇಂದ್ರಗಳನ್ನು (ಚೆಕ್-ಪೋಸ್ಟ್) ಮತ್ತು ವೇ-ಬ್ರಿಡ್ಜ್‌ಗಳನ್ನು ಸ್ಥಾಪಿಸುವ ಪ್ರಕ್ರಿಯೆಯಲ್ಲಿದೆ.ಪ್ರಸ್ತುತದಲ್ಲಿ, ಸರ್ಕಾರವು ತಮಿಳುನಾಡು-ಕರ್ನಾಟಕ ಗಡಿ ಹತ್ತಿರದ ಅತ್ತಿಬೆಲೆಯಲ್ಲಿ ಒಂದು ತಪಾಸಣಾ ಕೇಂದ್ರವನ್ನು (ಚೆಕ್-ಪೋಸ್ಟ್) ಸ್ಥಾಪಿಸಿದ್ದು, ಇನ್ನೂ ಹೆಚ್ಚು ತಪಾಸಣಾ ಕೇಂದ್ರಗಳನ್ನು (ಚೆಕ್-ಪೋಸ್ಟ್) ಮತ್ತು ಚ ವೇ-ಬ್ರಿಡ್ಜ್‌ಗಳನ್ನು ಸ್ಥಾಪಿಸುವ ಪ್ರಕ್ರಿಯೆಯಲ್ಲಿದೆ.

8. ಮುಖ್ಯವಾಗಿ ಕಾನೂನುಬದ್ಧವಾಗಿ ಹೊರತೆಗೆದ ಖನಿಜಗಳನ್ನು ರಾಜ್ಯದೊಳಗೆ ತರಲು ಪರವಾನಗಿ ನೀಡುವುದನ್ನು ಸುನಿಶ್ಚಿತಗೊಳಿಸುವುದು ಮತ್ತು ಒಮ್ಮೆ ನೀಡಿದ ಪರವಾನಗಿಯು ಬಹಳ ಸಲ ಬಳಕೆಯಾಗದಿರುವುದನ್ನು ಸುನಿಶ್ಚಿತಪಡಿಸಿಕೊಳ್ಳುವುದು ಈ ತಪಾಸಣಾ ಕೇಂದ್ರಗಳನ್ನು (ಚೆಕ್-ಪೋಸ್ಟ್) ಸ್ಥಾಪಿಸುವ ಉದ್ದೇಶವಾಗಿದೆ ಎಂದು ನಿವೇದಿಸಿಕೊಳ್ಳಲಾಗಿದೆ.ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ರಾಜ್ಯದೊಳಗೆ ಸಾಗಣೆ ಮಾಡಲಾಗುವ ಎಲ್ಲಾ ಖನಿಜಗಳನ್ನು ಕಾನೂನುಬದ್ಧವಾಗಿ ಹೊರತೆಗೆಯಲಾಗಿದೆ ಮತ್ತು ಅಕ್ರಮವಾಗಿ ಹೊರತೆಗೆದ ಯಾವುದೇ ಖನಿಜವನ್ನು ರಾಜ್ಯದೊಳಗೆ ತರಲು ಮತ್ತು ಮಾರಾಟ ಮಾಡಲು ಅನುಮತಿಸಲಾಗುವುದಿಲ್ಲ ಎಂಬುದನ್ನು ಈ ತಪಾಸಣಾ ಕೇಂದ್ರಗಳು (ಚೆಕ್-ಪೋಸ್ಟ್) ಖಾತರಿಪಡಿಸುತ್ತವೆ.

9. ಈ ತಪಾಸಣಾ ಕೇಂದ್ರಗಳನ್ನು (ಚೆಕ್-ಪೋಸ್ಟ್) ನಿರ್ವಹಿಸುವ ಸಲುವಾಗಿ, ಸಿಬ್ಬಂದಿ ಮತ್ತು ಮೂಲಸೌಕರ್ಯ ನಿರ್ವಹಣೆಯನ್ನು ಒಳಗೊಂಡು, ರಾಜ್ಯವು ಸಾಕಷ್ಟು ಪ್ರಮಾಣದ ವೆಚ್ಚಗಳನ್ನು ಭರಿಸುವ ಅಗತ್ಯವಿದೆ.ಕಾರಾಚರಣೆ ತಂಡಗಳ ನಿಯೋಜನೆ ಮತ್ತು ರಾಜ್ಯದಲ್ಲಿ ಈ ತಪಾಸಣಾ ಕೇಂದ್ರಗಳ (ಚೆಕ್-ಪೋಸ್ಟ್) ನಿರ್ವಹಣೆಗಾಗಿ 15,72,00,000/- ರೂ.ಗಳ ವಾರ್ಷಿಕ ವೆಚ್ಚವನ್ನು ರಾಜ್ಯವು ಭರಿಸಬೇಕಾದ ಅಗತ್ಯವಿದೆ ಎಂಬುದಾಗಿ ಒಟ್ಟು ವೆಚ್ಚವನ್ನು ಅಂದಾಜಿಸಲಾಗಿದೆ.ಆದುದರಿಂದ, ಅಕ್ರಮವಾಗಿ ಹೊರತೆಗೆದ ಖನಿಜವನ್ನು ರಾಜ್ಯದೊಳಗೆ ಸಾಗಣೆ ಮಾಡಬಾರದೆಂಬುದನ್ನು ಸುನಿಶ್ಚಿತಪಡಿಸಿಕೊಳ್ಳುವ ಸಲುವಾಗಿ ಈ ತಪಾಸಣಾ ಕೇಂದ್ರಗಳ (ಚೆಕ್-ಪೋಸ್ಟ್) ನಿರ್ವಹಣೆಗಾಗಿ ಗಣನೀಯ ಪ್ರಮಾಣದ ವೆಚ್ಚಗಳನ್ನು ರಾಜ್ಯವು ಭರಿಸುತ್ತಿದೆ ಎಂಬುದನ್ನು ಕಾಣಬಹುದಾಗಿದೆ.ಈ ಹಿನ್ನೆಲೆಯಲ್ಲಿ, ಪ್ರತಿ ಮೆಟ್ರಿಕ್ ಟನ್ನ್‌ಗೆ 70/- ರೂ.ಗಳ ಎಂದರೆ, 42 ( 7) ನೇ ನಿಯಮದ ಅಡಿಯಲ್ಲಿ ವಿಧಿಸಲಾಗುವ ಮೊತ್ತವು ಸೂಕ್ತ ನಿಯಂತ್ರಣಾತ್ಮಕ ಶುಲ್ಕವನ್ನು ಈ ತಪಾಸಣಾ ಕೇಂದ್ರಗಳ (ಚೆಕ್-ಪೋಸ್ಟ್) ನಿರ್ವಹಣೆಗಾಗಿ ಮತ್ತು ರಾಜ್ಯದೊಳಗೆ ಅಕ್ರಮವಾಗಿ ಹೊರತೆಗೆದ ಖನಿಜಗಳ ಸಾಗಣೆಯನ್ನು ತಪಾಸಣೆ ಮಾಡಿಸಲು ಭರಿಸಿದ ವೆಚ್ಚಗಳನ್ನು ಭರಿಸುವ ಸಲುವಾಗಿ ಸಂಗ್ರಹಿಸಲಾಗುತ್ತಿದೆ.ಆದುದರಿಂದ, ಪ್ರಶ್ನಿತ ನಿಯಮದ ಅಡಿಯಲ್ಲಿ ವಿಧಿಸಿದ ಶುಲ್ಕವು ನಿಯಂತ್ರಣಾತ್ಮಕ ಶುಲ್ಕದ ಸ್ವರೂಪದಲ್ಲಿದ್ದು, ರಾಜ್ಯದೊಳಗೆ ನಿರ್ದಿಷ್ಟ ಖನಿಜದ ಸಾಗಾಣಿಕೆದಾರರಿಂದ ಅದನ್ನು ಸಂಗ್ರಹಿಸಲಾಗುತ್ತಿದೆ.ತಪಾಸಣಾ ಕೇಂದ್ರಗಳನ್ನು (ಚೆಕ್-ಪೋಸ್ಟ್) ಸ್ಥಾಪಿಸ ಪಿಸುವ ಮತ್ತು ಖನಿಜಗಳ ಅಕ್ರಮ ಸಾಗಣೆಯ ಪರಿಣಾಮಕಾರಿ ತಪಾಸಣೆಗೆ ರಾಜ್ಯ ಸರ್ಕಾರವು ಭರಿಸಬೇಕಾಗಿರುವ ವೆಚ್ಚಗಳ ಅಂದಾಜನ್ನು ತೋರಿಸುವ ಸಲುವಾಗಿ ರೇಖಾಚಿತ್ರದ (ಚಾರ್ಟ್) ಪ್ರತಿಯನ್ನು ಈ ಅನುಬಂಧ ಆರ್ -1 ಆಗಿ ಹಾಜರುಪಡಿಸಲಾಗಿದೆ. "

(ಗೆರೆ ಹಾಕಿದ್ದಕ್ಕೆ ಒತ್ತು ನೀಡಲಾಗಿದೆ)

29. ತರುವಾಯ ರಾಜ್ಯ ಸಕಾರವು ವಾದಿಸಿರುವುದೇನೆಂದರೆ, ವ್ಯಾಮ್ ಆರ್ಗ್ಯಾನಿಕ್ ಕೆಮಿಕಲ್ಸ್ (ಮೇಲೆ ಹೇಳಿದ) ಮೊಕದ್ದಮೆಯಲ್ಲಿನ ನಿರ್ಣಯವನ್ನು ಒಳಗೊಂಡು, ಸರ್ವೋಚ್ಚ ನ್ಯಾಯಾಲಯದ ವಿವಿಧ ನಿರ್ಣಯಗಳು, ನಿಯಂತ್ರಣಾತ್ಮಕ ಶುಲ್ಕಗಳಾಗಿ ಚ ರಾಜ್ಯವು ಯಾವುದೇ ಮೊತ್ತವನ್ನು ಸಂಗ್ರಹಿಸಿದಾಗ ಪ್ರತಿಫಲವನ್ನು ಅಥವಾ ನಿಖರ ಪರಿಮಾಣವನ್ನು ತೋರಿಸುವ ಅಗತ್ಯವಿಲ್ಲವೆಂದು ವಿಧಿಸಿವೆ.ಅಂಥ ನಿಯಮ ರಚನಾಧಿಕಾರವು ಇದ್ದರೆ ಮಾತ್ರವೇ, ಶುಲ್ಕ ವಿಧಿಸುವ ಸ್ವರೂಪಕ್ಕೆ ಸಂಬಂಧಿಸಿದ ಪ್ರಶ್ನೆಯು

ಉದ್ಭವಿಸುತ್ತದೆ.ರಾಜ್ಯ ಸರ್ಕಾರಕ್ಕೆ ಅಂಥ ಯಾವುದೇ ನಿಯಮ ರಚನಾಧಿಕಾರವನ್ನು ಪ್ರದಾನ ಮಾಡಿರುವುದಿಲ್ಲವೆಂಬುದು ನಮಗೆ ಕಂಡುಬಂದಿದೆ. 23-ಸಿ ಪ್ರಕರಣದ ಅಡಿಯಲ್ಲಾಗಲಿ ಅಥವಾ 15 ನೇ ಪ್ರಕರಣದ ಅಡಿಯಲ್ಲಾಗಲಿ ನಿಯಮ ರಚನಾಧಿಕಾರಗಳನ್ನು ಚಲಾಯಿಸುವ ಮೂಲಕ ಇತರ ರಾಜ್ಯಗಳಲ್ಲಿ ಕಾನೂನುಬದ್ಧವಾಗಿ ಹೊರತೆಗೆದ ಖನಿಜಗಳನ್ನು ಸಾಗಣೆಯನ್ನು ನಿಯಂತ್ರಿಸಬಹುದೇ ಎಂಬುದು ನೈಜ ಪ್ರಶ್ನೆಯಾಗಿದೆ.ಈ ಪ್ರಶ್ನೆಗೆ ಉತ್ತರ, ನಾವು ಈ ಮೊದಲೇ ಅಭಿಪ್ರಾಯಪಟ್ಟಿರುವಂತೆ ಇಲ್ಲ ಎಂದೇ ಆಗಿದೆ.

30. 1994 ರ ಸದರಿ ನಿಯಮಗಳ 46 ನೇ ನಿಯಮದ ( 1) ನೇ ಉಪ-ನಿಯಮವನ್ನು ಅವಲಂಬಿಸಲಾಗಿತ್ತು.ಈ ಬಗ್ಗೆ ಅಧಿಸೂಚನೆಯ ಮೂಲಕ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಒಬ್ಬ ಅಧಿಕಾರಿಗೆ ನಮೂದು ಮಾಡಲು ಮತ್ತು ತಪಾಸಣೆ ಕೈಗೊಳ್ಳಲು 46 ನೇ ನಿಯಮದ ( 1) ನೇ ಉಪ-ನಿಯಮವು ಉಪಬಂಧ ಕಲ್ಪಿಸುತ್ತದೆ.ಇತರ ರಾಜ್ಯಗಳಿಂದ ಕರ್ನಾಟಕ ರಾಜ್ಯದೊಳಗೆ ತರುತ್ತಿರುವ ಕಾನೂನುಬದ್ಧವಾಗಿ ಹೊರತೆಗೆದ ಖನಿಜಗಳ ಸಂಬಂಧದಲ್ಲಿ 43 ನೇ ಅಥವಾ 46 ನೇ ನಿಯಮಗಳು ಏನನ್ನು ಹೇಳುವುದಿಲ್ಲ.ರಾಜ್ಯ ಸರ್ಕಾರವು ಸಲ್ಲಿಸಿದ ಆಕ್ಷೇಪಣೆಗಳ ಹೇಳಿಕೆಯ 9 ನೇ ಕಂಡಿಕೆಯಲ್ಲಿ, ಪ್ರಶ್ನಿತ ಉಪ-ನಿಯಮದ ಅಡಿಯಲ್ಲಿ ವಿಧಿಸಿದ ಶುಲ್ಕವು ನಿಯಂತ್ರಣಾತ್ಮಕ ಸ್ವರೂಪದ್ದಾಗಿದೆ ಎಂದು ವಾದಿಸಲಾಗಿದೆ.ಇತರ ರಾಜ್ಯಗಳಲ್ಲಿ ಕಾನೂನುಬದ್ಧವಾಗಿ ಹೊರತೆಗೆದ ಖನಿಜಗಳ ನಿಯಂತ್ರಣಾತ್ಮಕ ಶುಲ್ಕ ವಸೂಲಿಗೆ ಉಪಬಂಧ ಕಲ್ಪಿಸಿ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರವು ಯಾವುದೇ ನಿಯಮ ರಚನಾಧಿಕಾರವನ್ನು ಹೊಂದಿರುವುದಿಲ್ಲ.ಆದುದರಿಂದ, ಶುಲ್ಕಗಳ ಸ್ವರೂಪದ ಪ್ರಶ್ನೆ ಕುರಿತು ನಾವು ವಿಚಾರಣೆ ನಡೆಸುವ ಅಗತ್ಯವಿಲ್ಲ.

ಕಾರನಿರ್ವಾಹಕ ಅಧಿಕಾರ ಕುರಿತ ವಾದ:

31. ರಾಜ್ಯ ಸರ್ಕಾರವು 23-ಸಿ ಪ್ರಕರಣದ ಅಡಿಯಲ್ಲಿ ಪರ್ಯಾಲೋಚಿಸಿದ ವಿಷಯಗಳ ಬಗ್ಗೆ ವ್ಯವಹರಿಸುವ ಕಾರ್ಯನಿರ್ವಾಹಕ ಅಧಿಕಾರವನ್ನು ಹೊಂದಿದೆ ಎಂಬ ಮಟ್ಟಿಗೆ ವಿ. ಎಸ್. ಲಾಡ್ ಅಂಡ್ ಸನ್ಸ್ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ನಿರ್ಣಯವನ್ನು ಅವಲಂಬಿಸಿ ಮತ್ತೊಂದು ವಾದವನ್ನು ಮಂಡಿಸಲಾಗಿತ್ತು.ಆದಾಗ್ಯೂ, 23-ಸಿ ಪ್ರಕರಣವು ಇತರ ರಾಜ್ಯಗಳಲ್ಲಿ ಕಾನೂನುಬದ್ಧವಾಗಿ ಹೊರತೆಗೆದ ಖನಿಜಗಳ ಪ್ರವೇಶವನ್ನು ನಿಯಂತ್ರಿಸಲು ಅನ್ವಯವಾಗುವುದೇ ಇಲ್ಲ. ರಾಜ್ಯ ಸರ್ಕಾರದ ಪರವಾಗಿ ಮಂಡಿಸಿದ ವಾದಗಳ ಮುಖ್ಯ ಭಾಗವು, ಸಂಗ್ರಹಿಸಿದ ಶುಲ್ಕಗಳು ಮತ್ತು ನೀಡಲಾಗುವ ಸೇವೆಗಳ ನಡುವೆ ಪರಸ್ಪರ ಸಂಬಂಧಕ್ಕೆ ಪ್ರತಿಫಲ ಸಿದ್ಧಾಂತವನ್ನು ಸಂಬಂಧಿಸಿದ ವಿಷಯ ಕುರಿತಾಗಿದೆ.ಸದರಿ ವಾದವು ಸುಸಂಗತವಾಗಿದೆಯಾದರೂ, ಶುಲ್ಕವನ್ನು ವಿಧಿಸುವ ಮೂಲಕ ಇತರ ರಾಜ್ಯಗಳಿಂದ ಕಾನೂನುಬದ್ಧವಾಗಿ ಹೊರತೆಗೆದ ಉಪ ಖನಿಜಗಳ ಪ್ರವೇಶವನ್ನು ನಿಯಂತ್ರಿಸಲು ನಿಯಮಗಳನ್ನು ರಚಿಸಲು ರಾಜ್ಯಕ್ಕೆ ಅಧಿಕಾರ ಪ್ರದಾನ ಮಾಡಲಾಗಿದೆ.ಅಂಥ ಅಧಿಕಾರವು ರಾಜ್ಯ ಸರ್ಕಾರದಲ್ಲಿ ನಿಹಿತವಾಗಿದೆ.

ಸಂವಿಧಾನದ VII ನೇ ಅನುಸೂಚಿಯ II ನೇ ಪಟ್ಟಿಯ 66 ನೇ ನಮೂದನ್ನಾಧರಿಸಿ ಮಾಡಿದ ವಾದ

32. ಸಂವಿಧಾನದ ಏಳನೇ ಅನುಸೂಚಿಯ II ನೇ ಪಟ್ಟಿಯಲ್ಲಿ 66 ನೇ ನಮೂದನ್ನಾಧರಿಸಿ ವಾದವನ್ನು ಸಹ ಮಂಡಿಸಲಾಗಿದೆ.II ನೇ ಪಟ್ಟಿಯಲ್ಲಿರುವ 66 ನೇ ನಮೂದು ಯಾವುದೇ ವಿಷಯಗಳ ಸಂಬಂಧದಲ್ಲಿನ ಶುಲ್ಕಗಳನ್ನು ಕುರಿತದ್ದಾಗಿದೆ.II ನೇ ಪಟ್ಟಿಯು ರಾಜ್ಯ ಸರ್ಕಾರಗಳ ಶಾಸನಾತ್ಮಕ ಅಧಿಕಾರಗಳನ್ನು ಕುರಿತದ್ದಾಗಿದೆ.ಆದುದರಿಂದ, ರಾಜ್ಯ ಶಾಸಕಾಂಗವು II ನೇ ಪಟ್ಟಿಯ 66 ನೇ ನಮೂದನ್ನು ಅನ್ವಯಿಸಿ ಸಂಪೂರ್ಣ ಶಾಸನವನ್ನು ರಚಿಸುವ ಅಧಿಕಾರ ಹೊಂದಿದೆ.ಆದಾಗ್ಯೂ, ರಾಜ್ಯದ ಹೊರಗಿನ ಗಣಿಗಾರಿಕೆ ಕಾರಚಟುವಟಿಕೆಗಳನ್ನು ನಿಯಂತ್ರಿಸುವ ವಿಷಯವನ್ನು II ನೇ ಪಟ್ಟಿಯ 66 ನೇ ನಮೂದಿನಲ್ಲಿ ಸೇರಿಸಿರುವುದಿಲ್ಲ.II ನೇ ಪಟ್ಟಿಯಲ್ಲಿನ 66 ನೇ ನಮೂದು, ಯಾವುದೇ ವಿಷಯಗಳ ಸಂಬಂಧದಲ್ಲಿ ಶುಲ್ಕಗಳನ್ನು ನಿಯಮಿಸುವುದನ್ನು ಕುರಿತದ್ದಾಗಿದೆ.II ನೇ ಪಟ್ಟಿಯಲ್ಲಿನ

23 ನೇ ನಮೂದು, ಕೇಂದ್ರದ ಅಧೀನದಲ್ಲಿ ನಿಯಂತ್ರಣ ಮತ್ತು ಅಭಿವೃದ್ಧಿಗೆ ಸಂಬಂಧಿಸಿದಂತೆ I ನೇ ಪಟ್ಟಿಯ ಉಪಬಂಧಗಳಿಗೆ ಒಳಪಟ್ಟು ಗಣಿಗಳ ಮತ್ತು ಖನಿಜಗಳ ನಿಯಂತ್ರಣವನ್ನು ಕುರಿತದ್ದಾಗಿದೆ.ಈ ಕ್ಷೇತ್ರವನ್ನು ಕೇಂದ್ರ ಸರ್ಕಾರವು ಅಧಿನಿಯಮಿಸಿದ 1957 ರ ಸದರಿ ಅಧಿನಿಯಮವು ವ್ಯಾಪಿಸಿದ್ದು, ಅದು ಪ್ರಶ್ನಿತ ಉಪ-ನಿಯಮದಲ್ಲಿ ಉಪಬಂಧಿಸಿದಂತೆ ಶುಲ್ಕ ವಿಧಿಸುವುದಕ್ಕೆ ಉಪಬಂಧ ಕಲ್ಪಿಸುವುದಿಲ್ಲ.ಇದಲ್ಲದೆ, ರಾಜ್ಯ ಸರ್ಕಾರವು ಸದರಿ ಪಟ್ಟಿಯ 66 ನೇ ನಮೂದಿನ ನಿಬಂಧನೆಗಳಲ್ಲಿನ ಯಾವುದೇ ಕಾನೂನನ್ನು ಅಧಿನಿಯಮಿತಗೊಳಿಸಿರುವುದಿಲ್ಲ.ಶುಲ್ಕ ವಿಧಿಸುವ ಅಂಥ ಅಧಿಕಾರವು, II ನೇ ಪಟ್ಟಿಯ 66 ನೇ ನಮೂದಿನ ಕಾರಣದಿಂದ ರಾಜ್ಯ ಶಾಸಕಾಂಗದಲ್ಲಿ ನಿಹಿತವಾಗಿದೆಯೆಂದು ಭಾವಿಸಿ, ನಿಯಮ ರಚನಾಧಿಕಾರವು ಚಲಾಯಿಸಬಹುದಾಗಿದೆ.ಪರಂತು, ನಿಯಮಗಳನ್ನು ರಚಿಸುವ ಮೂಲಕ ಅಂಥ ಶುಲ್ಕ ವಿಧಿಸುವಿಕೆಗೆ ಅಧಿಕಾರ ನೀಡಿ ರಾಜ್ಯ ಶಾಸಕಾಂಗವು ಕಾನೂನನ್ನು ಅಧಿನಿಯಮಿತಗೊಳಿಸಿದೆ.

33. ಇತರ ರಾಜ್ಯಗಳಲ್ಲಿ ಕಾನೂನುಬದ್ಧವಾಗಿ ಹೊರತೆಗೆದ ಖನಿಜಗಳ ಮೇಲೆ ಸಾಗಣೆ ಶುಲ್ಕ ಅಥವಾ ಚಾರ್ಜನ್ನು ವಿಧಿಸುವ ಸಂಬಂಧದಲ್ಲಿ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರವು ಯಾವುದೇ ಶಾಸನಾತ್ಮಕ ಸಕ್ಷಮತೆಯನ್ನು ಹೊಂದಿರುವುದಿಲ್ಲ, ಸಂಗ್ರಹಿಸಿದ ಶುಲ್ಕ ಮತ್ತು ಸಲ್ಲಿಸಲಾಗುವ ಸೇವೆಗಳ ನಡುವಿರುವ ಪರಸ್ಪರ ಸಂಬಂಧ ಕುರಿತಂತೆ ಪ್ರತಿಫಲ ಸಿದ್ಧಾಂತದ ಪ್ರಶ್ನೆಯ ಬಗ್ಗೆ ನಾವು ವಿಚಾರಣೆ ನಡೆಸಬೇಕಾದ ಅವಶ್ಯಕತೆ ಇರುವುದಿಲ್ಲ.

34. ಈಗ, ಸಂವಿಧಾನದ 301 ನೇ ಮತ್ತು 304 ನೇ ಅನುಚ್ಛೇದದ ಉಲ್ಲಂಘನೆಗೆ ಸಂಬಂಧಿಸಿದಂತೆ ಅರ್ಜಿದಾರರು ಮಂಡಿಸಿದ ಇತರ ವಾದಕ್ಕೆ ಬರುವುದಾದರೆ, 1957 ರ ಸದರಿ ಅಧಿನಿಯಮದ 15 ನೇ ಪ್ರಕರಣದ ಅಡಿಯಲ್ಲಾಗಲಿ ಅಥವಾ 23-ಸಿ ಪ್ರಕರಣದ ಅಡಿಯಲ್ಲಾಗಲಿ, ಇತರ ರಾಜ್ಯಗಳಿಂದ ಕಾನೂನುಬದ್ಧವಾಗಿ ಹೊರತೆಗೆದ ಖನಿಜಗಳ ಪ್ರವೇಶವನ್ನು ನಿಯಂತ್ರಿಸಲು ಮತ್ತು ಕರ್ನಾಟಕ ರಾಜ್ಯದೊಳಗೆ ಇತರ ರಾಜ್ಯಗಳಿಂದ ಕಾನೂನುಬದ್ಧವಾಗಿ ಹೊರತೆಗೆದ ಖನಿಜಗಳ ಪ್ರವೇಶದ ಮೇಲೆ ಶುಲ್ಕಗಳನ್ನು ವಿಧಿಸುವ ಸಂಬಂಧದಲ್ಲಿ ನಿಯಮ ರಚಿಸುವ ಅಧಿಕಾರ ರಾಜ್ಯ ಸರ್ಕಾರದಲ್ಲಿ ನಿಹಿತವಾಗಿಲ್ಲವೆಂಬಷ್ಟರಮಟ್ಟಿಗೆ, ಸದರಿ ವಾದ ಕುರಿತು ನಾವು ವಿಚಾರಣೆ ನಡೆಸುವ ಅವಶ್ಯಕತೆ ಇರುವುದಿಲ್ಲ.ಆದುದರಿಂದ, ಈ ಅರ್ಜಿಗಳು ಯಶಸ್ವಿಯಾಗಿದ್ದು, ತದನುಸಾರವಾಗಿ, ನಾವು ಈ ಮುಂದಿನ ಆದೇಶವನ್ನು ಹೊರಡಿಸಿದ್ದೇವೆ:

ಆದೇಶ

1) ರಿಟ್ ಅರ್ಜಿಸಂಖ್ಯೆ: 8851/2020 ರ ಮನವಿ ( ಎ) ಪ್ರಕಾರ ರಿಟ್ ಅರ್ಜಿಗಳನ್ನು ಪುರಸ್ಕರಿಸಲಾಗಿದ್ದು, ಅದನ್ನು ಈ ಕೆಳಗಿನಂತೆ ಓದಲಾಗಿದೆ:

( ಎ) ಉಲ್ಲೇಖಸಂಖ್ಯೆ: ಸಿ 1 115 ಎಂಎಂಎನ್ 2019 ನ್ನು (ಅನುಬಂಧ-ಎ) ಹೊಂದಿರುವದಿನಾಂಕ: 30.06.2020 ರ ವಿಶೇಷ ರಾಜ್ಯಪತ್ರದಲ್ಲಿ ಅಧಿಸೂಚಿಸಲಾದ ತಿದ್ದುಪಡಿಯ ರೂಪದಲ್ಲಿ ಸೇರಿಸಿದ್ದ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳು, 1994 ರ 42 ( 7) ನೇ ನಿಯಮವು ಸಂವಿಧಾನಕ್ಕೆ ವಿರುದ್ಧವಾದುದಾಗಿದೆ ಮತ್ತು ಷರ್ಷಿಯೋರರಿ ಅಥವಾ ಯಾವುದೇ ಇತರ ಸೂಕ್ತ ರಿಟ್, ಆದೇಶ ಅಥವಾ ನಿರ್ದೇಶನದ ಸ್ವರೂಪದಲ್ಲಿ ರಿಟ್ ಮೂಲಕ ಗಣಿಗಳ ಮತ್ತು ಖನಿಜಗಳ (ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ, 1957 ರ ಅಧಿಕಾರವನ್ನು ಮೀರಿದ್ದಾಗಿದೆ ಎಂದು ತಳ್ಳಿಹಾಕಲಾಗಿದೆ.

ii) ವೆಚ್ಚಕ್ಕೆ ಸಂಬಂಧಿಸಿದಂತೆ ಯಾವುದೇ ಆದೇಶವಿಲ್ಲ.